# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಭಾನುವಾರ, ಡಿಸೆಂಬರ್ 08, 2024

ಸಂಪುಟ : 51 ಸಂಚಿಕೆ : 205 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




**ನೂಪುರ ನೃತ್ಯೋತ್ಸವ**

ದಾವಣಗೆರೆ: ನೂಪುರ ಕಲಾ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶನಿವಾರ ಸಂಜೆ ಬಂಟರ ಭವನದಲ್ಲಿ ನಡೆದ ನೂಪುರ ನೃತ್ಯೋತ್ಸವ ಕಾರ್ಯಕ್ರಮದಲ್ಲಿ ಮಕ್ಕಳು ನಡೆಸಿಕೊಟ್ಟ ನೃತ್ಯ ರೂಪಕ.

## ರಾಸಾಯನಿಕ ಬಳಕೆಯಿಂದ ವಿಷವಾದ ಆಹಾರ

### ಸಾಣೇಹಳ್ಳಿ ಶ್ರೀ ವಿಷಾದ

ಆನಗೋಡು, ಡಿ. 8 - ಕೃಷಿಯಲ್ಲಿ ರಾಸಾಯನಿಕ ಬಳಕೆ ಹೆಚ್ಚಿ ಆಹಾರ ವಿಷವಾಗಿ, ಪ್ರಕೃತಿಯೂ ಹಾಳಾಗಿದೆ ಎಂದು ಸಾಣೇಹಳ್ಳಿಯ ಪಂಡಿತಾರಾಧ್ಯ ಶ್ರೀ ವಿಷಾದಿಸಿದರು.

ಸಮೀಪದ ಆನಗೋಡಿನಲ್ಲಿ ರೈತ ಭವನದ ಶಂಕು ಸ್ಥಾಪನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜಮುಖಿ ಕೆಲಸಗಳಿಗೆ ಕೇವಲ ಸರ್ಕಾರದ ಹಣ ಕಾಯಬಾರದು. ಒಳ್ಳೆಯ ಕಾರ್ಯಕ್ಕೆ ಭಿಕ್ಷೆ ಎತ್ತಿದರೂ ಒಳ್ಳೆಯದು. ಇಂದು ನಾವು ಉಣ್ಣುವ ಅನ್ನದ ತಟ್ಟೆಯಲ್ಲಿ ವಿಷ ತುಂಬಿದೆ. ಸಿರಿಧಾನ್ಯದ ಬದಲು ಅಕ್ಕಿ ಮತ್ತು ಗೋದಿ ಬಂದ ಬಳಿಕ ಕ್ರಿಮಿನಾಶಕ, ರೋಗನಾಶಕ ರಾಸಾಯನಿಕ ಬಳಕೆ ಹೆಚ್ಚಿದೆ. ಅಮೃತ ಸಮಾನವಾದ ಎದೆ ಹಾಲಿನಲ್ಲೂ ವಿಷ ತುಂಬಿದೆ. ರೈತರು ಕೀಟನಾಶಕ ಬಳಸಿ ಪ್ರಕೃತಿ ಹಾಳುಮಾಡುತ್ತಿದ್ದಾರೆ. ಕ್ರಿಮಿನಾಶಕ ಬಳಕೆ ಕಡಿಮೆ ಮಾಡಬೇಕು. ಏಕ ಬೆಳೆ ಕೈಬಿಟ್ಟು ಅನೇಕ ಬೆಳೆ ಬೆಳೆಯಬೇಕು. ರೈತ ಭವನದಲ್ಲಿ ಇಂಥ ಚಿಂತನ - ಮಂಥನ ನಡೆದು ಅದರ ಸಾರ ಸರ್ಕಾರಕ್ಕೆ ಮುಟ್ಟಿಸಿ, ರೈತ ಪರ ಕಾರ್ಯಕ್ರಮ ರೂಪಿಸುವಂತಾಗಬೇಕು. ಕಳಪೆ ಕಾಮಗಾರಿಗೆ ಅವಕಾಶ ಕೊಡಬಾರದು. ಪರ್ಸೆಂಟೇಜ್ ದಂಧೆ ಬಂದಿರುವುದು ನಮ್ಮಿಂದಲೇ. ಶಾಸಕರು ಚುನಾವಣೆಗೆ ತೆತ್ತ ಹಣ ಪಡೆಯಲು ಅಧಿಕಾರಿಗಳನ್ನೇ ಸುಲಿಯಬೇಕಾಗುತ್ತದೆ. ಹಣ ಪಡೆಯದೇ ಮತ ಹಾಕಿದರೆ ಈ ಸಮಸ್ಯೆ ಬರುವುದಿಲ್ಲ. ಮಲ್ಲಿಕಾರ್ಜುನ ಅವರಿಗೆ ಆಸಕ್ತಿ ಇದೆ ಕೆಲಸ ಮಾಡುತ್ತಾರೆ. ಪ್ರಭಾ ಮಲ್ಲಿಕಾರ್ಜುನ್ ಎಲ್ಲರ ಸಲಹೆ ಸ್ವೀಕರಿಸುವ ಗುಣ ಹೊಂದಿದ್ದಾರೆ ಎಂದು ಪ್ರಶಂಸಿಸಿದರು.

ಸಂಸತ್ ಸದಸ್ಯೆ ಡಾ. ಪ್ರಭಾ (2ನೇ ಪುಟಕ್ಕೆ)





**ಸೋಮವಾರ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ಆರಂಭ**

## ತರಾಟೆಗೆ ಪ್ರತಿಪಕ್ಷಗಳು ಸಜ್ಜು

ಬೆಂಗಳೂರು, ಡಿ. 7- ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣ, ರೈತರು ಮತ್ತು ಮಠ ಮಾನ್ಯಗಳ ಭೂಮಿಯನ್ನು ವಕ್ಫ್ ಬೋರ್ಡ್ ಆಸ್ತಿಯೆಂದು ಒಕ್ಕಲೆಬ್ಬಿಸುತ್ತಿರುವ ವಿವಾದ ಹಾಗೂ ಐದು ಗ್ಯಾರಂಟಿ ಯೋಜನೆಗಳ ಜಾರಿಯಿಂದ ಶಾಸಕರಿಗೆ ಅನುದಾನ ನೀಡಲೂ ಆಗದೆ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಅಸ್ತ್ರಗಳನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಪ್ರತಿಪಕ್ಷಗಳು ಸಜ್ಜುಗೊಂಡಿವೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರದಿಂದ ಆರಂಭವಾಗಲಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಈ ವಿಷಯಗಳೇ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಭಾರೀ ವಾಕ್ ಸಮರಕ್ಕೆ ಎಡೆ ಮಾಡಿಕೊಡಲಿವೆ.

ಸರ್ಕಾರದ ವಿರುದ್ಧದ ಹಗರಣಗಳ ಜೊತೆಗೆ ಆಡಳಿತ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಗಾದಿಗಾಗಿ ನಡೆಯುತ್ತಿರುವ ಆಂತರಿಕ ಹಾಗೂ ಬಹಿರಂಗ ಕಚ್ಚಾಟಗಳೂ ಪ್ರತಿಪಕ್ಷಗಳ ವಾಗ್ದಾಳಿಗೆ ವೇದಿಕೆ ಸೃಷ್ಟಿಸುವ ಸಾಧ್ಯತೆ ಇದೆ.

ಪ್ರತಿಪಕ್ಷಗಳ ಅಸ್ತ್ರಕ್ಕೆ ಪ್ರತ್ಯಸ್ತ್ರ ಬಿಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಾ ತಯಾರಿ ನಡೆಸಿದ್ದಾರೆ.

ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಆಡಳಿತಾವಧಿಯಲ್ಲಿ ನಡೆದಿರುವ ಕೋವಿಡ್ ಹಗರಣ, ಭೋವಿ ಮತ್ತು ಇತರೆ ನಿಗಮಗಳಲ್ಲಿ ನಡೆದಿರುವ ಅವ್ಯವಹಾರಗಳೂ ಸೇರಿದಂತೆ 19 ಆರೋಪಗಳನ್ನು ಪ್ರತಿಪಕ್ಷ ಬಿಜೆಪಿ ಹಾಗೂ ಆ ಪಕ್ಷದ ಶಾಸಕರು ಮತ್ತು ಮುಖಂಡರ ವಿರುದ್ಧ ಹರಿಹಾಯಲು ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

ವಕ್ಫ್ ವಿವಾದ ಮುಂದಿಟ್ಟುಕೊಂಡು ಬಿಜೆಪಿ ಬೀದಿಗಿಳಿಯುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿ, ಅಧಿವೇಶನ ನಡೆಯುವ ಒಂದು ತಿಂಗಳು ಮುನ್ನವೇ ಹಿರಿಯ ಸಚಿವರ ಸಭೆ ಕರೆದು ಪ್ರತಿಪಕ್ಷವನ್ನು ಹೇಗೆ ಇಕ್ಕಟ್ಟಿಗೆ ಸಿಲುಕಿಸಬೇಕು ಎಂಬ ಪಾಠ ಮಾಡಿದ್ದರು.

ಬಿಜೆಪಿ ಆಡಳಿತದ ವೇಳೆ ನಿಮ್ಮ ಇಲಾಖೆಗಳಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರಗಳನ್ನು (2ನೇ ಪುಟಕ್ಕೆ)

## 14ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಪ್ರೊ.ರಾಮಚಂದ್ರಪ್ಪ



ದಾವಣಗೆರೆ, ಡಿ.7- ಜಗಳೂರು ಪಟ್ಟಣದಲ್ಲಿ ಜನವರಿ 11 ಹಾಗೂ 12ರಂದು ನಡೆಯುವ ಜಿಲ್ಲಾ 14ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ವಿಶ್ರಾಂತ ಕನ್ನಡ ಅಧ್ಯಾಪಕ, ಲೇಖಕ, ಪ್ರೊ. ಎ.ಬಿ. ರಾಮಚಂದ್ರಪ್ಪ ಆಯ್ಕೆಯಾಗಿದ್ದಾರೆ.

ಶನಿವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು.

ವೈಚಾರಿಕ ಹಾಗೂ ಸಾಂಸ್ಕೃತಿಕ ಚಿಂತಕ, ಜನಪರ ಹೋರಾಟಗಾರ ಪ್ರೊ. ಎ.ಬಿ. ರಾಮಚಂದ್ರಪ್ಪನವರು ಮೂರು ದಶಕಗಳಿಗೂ ಹೆಚ್ಚಿನ ಕಾಲ ಪದವಿ ಕಾಲೇಜು ಹಾಗೂ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. "ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್ ಚಿಂತನೆಗಳು" ವಿಷಯದಲ್ಲಿ ಸಂಶೋಧನಾ ಮಹಾಪ್ರಬಂಧ ಮಂಡನೆ ಮಾಡಿ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಈವರೆಗೆ ಅವರ 19 ಕೃತಿಗಳು ಪ್ರಕಟಗೊಂಡಿವೆ. ಪ್ರಸ್ತುತ ಕರ್ನಾಟಕ ಸರ್ಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿದ್ದಾರೆ.

ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕ ಕಾರ್ಯಕಾರಿ ಸಮಿತಿ ಸದಸ್ಯರು ಪ್ರೊ. ಎ.ಬಿ.ರಾಮಚಂದ್ರಪ್ಪನವರನ್ನು ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಲು ಒಲವು ತೋರಿದ್ದರಿಂದ ಸರ್ವಾಧ್ಯಕ್ಷತೆಯ ಆಯ್ಕೆ ಸುಗಮವಾಗಿ ನಡೆಯಿತು ಎಂದು ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದ್ದಾರೆ.

ಜಗಳೂರಿನ ಶಾಸಕ ಬಿ.ದೇವೇಂದ್ರಪ್ಪ ಅವರು ಸಮ್ಮೇಳನಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದ್ದಾರೆ. ಹಾಗಾಗಿ ಸಮ್ಮೇಳನವನ್ನು ಎರಡು ದಿನ ಅರ್ಥಪೂರ್ಣವಾಗಿ ಸಮ್ಮೇಳನ ನಡೆಸುವುದಾಗಿ ಬಿ.ವಾಮದೇವಪ್ಪ ಹೇಳಿದರು. (2ನೇ ಪುಟಕ್ಕೆ)




## 'ಸುವರ್ಣ ಸೌಧ' ಮುತ್ತಿಗೆ ಹೋರಾಟಕ್ಕೆ ಜಿಲ್ಲೆಯಿಂದ 1 ಲಕ್ಷ ಜನ ಸೇರುವ ನಿರೀಕ್ಷೆ

ದಾವಣಗೆರೆ, ಡಿ. 7 - 2 ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಇದೇ ದಿನಾಂಕ 10 ರಂದು ಕೂಡಲಸಂಗಮದ ಪಂಚಮಸಾಲಿ ಸಮಾಜದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಟ್ರ್ಯಾಕ್ಟರ್‌ಗಳೊಂದಿಗೆ 'ಸುವರ್ಣ ಸೌಧ ' ಮುತ್ತಿಗೆ ಹೋರಾಟ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಒಂದು ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದು ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಆರ್.ವಿ. ಅಶೋಕ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾಜಕ್ಕೆ 2 ಎ ಮೀಸಲಾತಿ ನೀಡುವಂತೆ ಒತ್ತಾಯಿಸಿ ಕಳೆದ ನಾಲ್ಕು ವರ್ಷಗಳಿಂದ ಆರು ಹಂತದ ಹೋರಾಟವನ್ನು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆಸಲಾಗಿದೆ. ಸರ್ಕಾರ ಕೇವಲ ಭರವಸೆ ನೀಡುತ್ತಾ ವಿಳಂಬ ನೀತಿ ಅನುಸರಿಸುತ್ತಾ ಬರುತ್ತಿದೆ ಎಂದು ಕಿಡಿಕಾರಿದರು.

ಈ ಬಾರಿಯ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು 2 ಎ ಮೀಸಲಾತಿ ಘೋಷಿಸಬೇಕು. ಇಲ್ಲದಿದ್ದರೆ ಪಂಚಮಸಾಲಿ ಸಮಾಜದವರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ. ಶ್ರೀಗಳ ಮತ್ತು ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅವರ ನೇತೃತ್ವದ ಹೋರಾಟ ಇದೀಗ ಏಳನೇ ಹಂತ ತಲುಪಿದೆ. ಬೆಳಗಾವಿಯ ಈ ಹೋರಾಟಕ್ಕೆ ರಾಜ್ಯದ ಎಲ್ಲಾ ಪಂಚಮಸಾಲಿ ಸಮಾಜದ ಬಂಧುಗಳು ಟ್ರ್ಯಾಕ್ಟರ್ ಸಮೇತ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಚಳವಳಿ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಹೆಚ್.ಕೆ. ಗಿರೀಶ್, ಮಂಜು ಪೈಲ್ವಾನ್, ಶಂಕರ್, ವೀರೇಶ್ ಉಪಸ್ಥಿತರಿದ್ದರು.

### ಈಶ್ವರ-ವಿನಾಯಕ ದೇವಸ್ಥಾನದಲ್ಲಿ ನಾಳೆ ಕಾರ್ತಿಕ

ದಾವಣಗೆರೆ, ಡಿ.7- ಶಿವಕುಮಾರ ಸ್ವಾಮಿ ಬಡಾವಣೆಯ ಈಶ್ವರ ವಿನಾಯಕ ಟ್ರಸ್ಟ್‌ನ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ನಾಡಿದ್ದು ದಿನಾಂಕ 9 ರ ಸೋಮವಾರ ನಡೆಯಲಿದೆ.

# ಶೈಕ್ಷಣಿಕವಾಗಿ ಮುನ್ನಡೆದರೆ ಮಾತ್ರ ಸಮಾಜ ಪರಿವರ್ತನೆ ಸಾಧ್ಯ

## ಹರಪನಹಳ್ಳಿಯ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಜಿ.ಬಿ.ವಿನಯಕುಮಾರ್



ಹರಪನಹಳ್ಳಿ, ಡಿ.7 - ಸಮಾಜ ಪರಿವರ್ತನೆಯಾಗಬೇಕಾದರೆ ಜನ ಸಾಮಾನ್ಯರು ರಾಜಕೀಯ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಮುಂದೆ ಬರಬೇಕು ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ, ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯಕುಮಾರ್ ಹೇಳಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ತಾಲ್ಲೂಕು ಕನಕ ನೌಕರರ ಸಂಘ, ಬೀರೇಶ್ವರ ಕುರುಬ ಸಂಘ ಮತ್ತು ಯುವ ಘಟಕದ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಭಕ್ತ ಕನಕದಾಸರ 537ನೇ ಜಯಂತ್ಯೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ತಮ್ಮ ಪ್ರತಿಭೆಯನ್ನು ಹೊರಹಾಕಬೇಕಿದೆ, ಕುರುಬ ಸಮುದಾಯದ ಮಕ್ಕಳಿಗೆ ಐಎಎಸ್, ಕೆಎಎಸ್, ವಿದ್ಯಾಭ್ಯಾಸ ಕೊಡಲು ಪೋಷಕರು ಮುಂದಾಗಬೇಕು, ಇಂದು ಪ್ರತಿಭೆಗಳು ಕೇವಲ ಕೆಲವೇ ಕೆಲವು ವರ್ಗಗಳಿಗೆ ಸೀಮಿತವಾಗುತ್ತಿವೆ. ಈ ಬಗ್ಗೆ ನಾವು ಜಾಗೃತರಾಗಬೇಕು ಎಂದರು.

ಮುಖಂಡ ವೈ.ಕೆ.ಬಿ.ದುರುಗಪ್ಪ ಮತ್ತು ಹಡಗಲಿ ಸಮಾಜ ಕಲ್ಯಾಣಾಧಿಕಾರಿ ಆನಂದ ಡೊಳ್ಳಿನ ಮಾತನಾಡಿ, ಕುರುಬ ಸಮುದಾಯ ಒಗ್ಗಟ್ಟಾಗಿ ಸಮುದಾಯದ ಏಳಿಗೆಗೆ ಶ್ರಮಿಸಬೇಕು, ಸರ್ಕಾರ ಎಲ್ಲ ರಂಗದಲ್ಲೂ ಸೌಲಭ್ಯಗಳನ್ನು ಕೊಡುತ್ತಿದೆ. ಅದರ ಬಳಕೆ ಮಾಡಿಕೊಂಡು ಸಾಮಾಜಿಕವಾಗಿ ಮುಖ್ಯ ವಾಹಿನಿಗೆ ಬರಬೇಕು ಎಂದರು.

ತಾಲ್ಲೂಕು ಕುರುಬ ಸಮಾಜ ಸಂಘದ ಅಧ್ಯಕ್ಷ, ವಕೀಲ ಬಂಡ್ರಿ ಗೋಣಿಬಸಪ್ಪ ಮಾತನಾಡಿ, ಕನಕದಾಸರೂ ಸಾಕಷ್ಟು ಸಂಕಷ್ಟ ಅನುಭವಿಸಿ, ಅಂದು ವ್ಯವಸ್ಥೆ ವಿರುದ್ದ ಹೋರಾಟ ಮಾಡಿ, ಸಾಹಿತ್ಯದ ಮುಖಾಂತರ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದರು. ಕನಕದಾಸರ ಜಯಂತಿ ನಿಮಿತ್ತ ಪ್ರತಿಭಾ ಪುರಸ್ಕಾರ ಮಾಡಿದರೆ ಸಾಲದು, ಸಮುದಾಯದಲ್ಲಿ ಬರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಮುಖ್ಯವಾಹಿನಿಗೆ ಬರುವಂತಾಗಬೇಕು ಎಂದರು.

ತಾಲ್ಲೂಕು ಕನಕ ನೌಕರರ ಸಂಘದ ಗೌರವಾಧ್ಯಕ್ಷ ಎಸ್.ರಾಮಪ್ಪ, ಅಧ್ಯಕ್ಷ ಸಿದ್ದಪ್ಪ ವೈ.ಹರಿಂದ್ರಾಳ್ ಮಾತನಾಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶಿಕ್ಷಕಿ ಜಿ.ಮಹಾದೇವಮ್ಮ, ಸಮಾಜ ಕಲ್ಯಾಣ ಅಧಿಕಾರಿ ಆನಂದ ಡೊಳ್ಳಿನ ಇವರಿಗೆ ಕನಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಜೋಗಿನರ ಭರತೇಶ, ಉದ್ದಾರ ಗಣೇಶ್, ಎಚ್. ವಸಂತಪ್ಪ, ಸತ್ತೂರು ಯಲ್ಲಮ್ಮ, ಮುಖಂಡರಾದ ಮುತ್ತಿಗಿ ಜಂಬಣ್ಣ, ಹೆಚ್.ಪಿ.ಬಸವರಾಜ, ವಕೀಲರಾದ ಮೈದೂರು ಮಲ್ಲಿಕಾರ್ಜುನ್, ಬಸವರಾಜ್ ಹುಲಿಯಪ್ಪನವರ್, ವೆಂಕಟೇಶ ಬಾಗಲಾರ್, ಪಾಲಾಕ್ಷಪ್ಪ, ಎಚ್.ಪರಶುರಾಮ, ತಾಲ್ಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಬಿ.ರಾಜಶೇಖರ, ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಂದ್ರಮೌಳಿ, ಶಿಕ್ಷಕರಾದ ಪದ್ಮರಾಜ ಜೈನ್, ಚನ್ನಪ್ಪ ಕಂಬಳಿ, ಬಡಗಿ ಮೆಹಬೂಬ್, ವೃಷಭೇಂದ್ರ, ತಿಮ್ಮಪ್ಪ, ಮಾರುತಿ, ಮಂಡಿ ನಾಗರಾಜ, ಚಂದ್ರಪ್ಪ, ಕೆ.ರತ್ನಮ್ಮ, ಶ್ರೀದೇವಿ ಆನಂದ ದೊಳ್ಳಿನ, ಸೇರಿದಂತೆ ಇತರರು ಇದ್ದರು.

## ಜಗಳೂರು ; ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರೌಢಶಾಲಾ ಸಹಶಿಕ್ಷಕರ ಮನವಿ



ಜಗಳೂರು, ಡಿ. 7 - ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗಳ ಸಂಖ್ಯೆ 3 ರಿಂದ 2 ಕ್ಕೆ ಇಳಿಸುವುದು, ಪ್ರಶ್ನೆ ಪತ್ರಿಕೆ ಪದ್ಧತಿಯಲ್ಲಿ ಸರಳೀಕರಣಕ್ಕೆ ಒತ್ತು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಶನಿವಾರದಂದು ಕ.ರಾ. ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ವತಿಯಿಂದ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಸಂಘದ ತಾಲ್ಲೂಕು ಅಧ್ಯಕ್ಷ ಮಹಂತೇಶ್ ಮಾತನಾಡಿ, ಎಸ್ ಎಸ್ ಎಲ್ ಸಿ ಪರೀಕ್ಷೆ ಫಲಿತಾಂಶದ ಬಗ್ಗೆ ಶಿಕ್ಷಕರು ಒತ್ತಡದಲ್ಲಿ ಕಾರ್ಯ ನಿರ್ವಹಣೆ ಮಾಡುವಂತಾಗಿದೆ. ಅಲ್ಲದೇ ರಜಾ ದಿನಗಳಲ್ಲೂ ಶಾಲೆ ಹಾಗೂ ಇಲಾಖೆ ಕೆಲಸಗಳ ಭಾರಗಳ ಮಧ್ಯೆ ವರ್ಷದಲ್ಲಿ 3 ವಾರ್ಷಿಕ ಪರೀಕ್ಷೆಗಳು, ಕಾಲಮಿತಿ ವೇತನ ಬಡ್ತಿ ವಿಳಂಬ, ವೇತನ ಪಾವತಿ ಸಮಸ್ಯೆ, ಅನುದಾನಿತ ಶಾಲಾ ಶಿಕ್ಷಕರ ನೇಮಕಕ್ಕೆ ಅನುಮತಿ ನೀಡದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಪ್ರೌಢಶಾಲಾ ಶಿಕ್ಷಕರು ಅನುಭವಿಸುತ್ತಿದ್ದಾರೆ. ಸರ್ಕಾರ ಕೂಡಲೇ ಇತ್ತ ಗಮನಹರಿಸಿ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಕಾರ್ಯದರ್ಶಿ ಎ.ಎಸ್. ಕಲ್ಲಿನಾಥ್, ಸಹ ಶಿಕ್ಷಕರ ಸಂಘದ ತಾಲ್ಲೂಕು ಕಾರ್ಯದರ್ಶಿ ಮಧು ಮಾತನಾಡಿದರು.

ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳಾದ ಚಿಕ್ಕಪ್ಪ, ಹನುಮಂತಪ್ಪ, ವೆಂಕಟೇಶ, ಬಸವರಾಜ್, ಗೋವಿಂದಪ್ಪ, ಸರ್ಕಾರಿ ನೌಕರ ಸಂಘದ ನಿರ್ದೇಶಕ ಮಂಜುನಾಥ, ಶಿಕ್ಷಕರಾದ ಜ್ಯೋತಿ ಕುಮಾರ್, ಸಿದ್ದೇಶ್, ಮಧು, ಪಾಲಾಕ್ಷ, ಕುಮಾರಸ್ವಾಮಿ ಸೇರಿದಂತೆ ಮತ್ತಿತರರು ಇದ್ದರು.

## ತರಾಟೆಗೆ ಪ್ರತಿಪಕ್ಷಗಳು ಸಜ್ಜು

**(1ನೇ ಪುಟದಿಂದ)** ಕೆದಕಿ, ದಾಖಲೆ ಸಹಿತ ಸದನದಲ್ಲಿ ಧೈರ್ಯವಾಗಿ ಮಂಡಿಸಿ ಪ್ರತಿಪಕ್ಷಗಳನ್ನು ಎದುರಿಸಬೇಕು ಎಂದಿದ್ದರು.

ಸದನದಲ್ಲಿ ತಮಗೆ ಎದುರಾಗಬಹುದಾದ ಆರೋಪಗಳ ತೀವ್ರತೆ ಕಡಿಮೆ ಮಾಡುವ ಉದ್ದೇಶದಿಂದ ಏಕಾಏಕಿ ಕೋವಿಡ್ ಹಗರಣದ ಮಧ್ಯಂತರ ವರದಿಯನ್ನು ಕೈಗೆತ್ತಿಕೊಂಡ ಸರ್ಕಾರ ಎಸ್‌ಐಟಿ ತನಿಖೆಗೆ ತೀರ್ಮಾನಿಸಿತು.

ಅಲ್ಲದೆ, ಯಡಿಯೂರಪ್ಪ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವ ನಿರ್ಧಾರವನ್ನೂ ಕೈಗೊಂಡಿತು, ಇಷ್ಟಾದರೂ ಬಿಜೆಪಿ ಮುಖಂಡರು ಸರ್ಕಾರದ ವಿರುದ್ಧ ಹೋರಾಟ ಕೈಬಿಡಲಿಲ್ಲ.

ಮುಡಾದಲ್ಲಿ ನಡೆದಿರುವ ಸಾವಿರಾರು ಕೋಟಿ ರೂ. ಹಗರಣ ತನಿಖೆಯನ್ನು ಸಿಬಿಐಗೆ ವಹಿಸಬೇಕು ಹಾಗೂ ವಕ್ಫ್ ಮಂಡಳಿಯನ್ನೇ ರದ್ದು ಮಾಡಬೇಕೆಂಬ ಹೋರಾಟಕ್ಕೆ ಬಿಜೆಪಿ ಸಿದ್ಧತೆ ನಡೆಸಿದೆ.

ಒಂದು ವರ್ಗವನ್ನು ಓಲೈಸಿಕೊಳ್ಳಲು ಬಹುಸಂಖ್ಯಾತರ ವಿರುದ್ಧದ ನಿರ್ಣಯಗಳನ್ನು ಸರ್ಕಾರ ಕೈಗೊಳ್ಳುತ್ತಿರುವ ಬಗ್ಗೆ ಪ್ರತಿಪಕ್ಷಗಳು ಸದನದ ಗಮನ ಸೆಳೆಯಲಿವೆ.

ಮುಂಬೈ ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಚರ್ಚೆಗೆ ಒತ್ತುಕೊಡುವುದಾಗಿ ಸರ್ಕಾರ ಹಾಗೂ ಉಭಯ ಸದನಗಳ ಪೀಠಾಸೀನಾಧಿಕಾರಿಗಳು ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಪ್ರತಿ ಬಾರಿ ನಡೆಯುವ ಅಧಿವೇಶನ ಸಂದರ್ಭಗಳಲ್ಲಿ ಸರ್ಕಾರದಿಂದ ಈ ಮಾತುಗಳು ಕೇಳಿಬರುತ್ತವೆ, ಆದರೆ, ಅಲ್ಲಿ ನಡೆಯುವ ಚರ್ಚೆಯೇ ಬೇರೆಯಾಗಿರುತ್ತದೆ, ಆದರೆ, ಈ ಬಾರಿ ಸಿದ್ದರಾಮಯ್ಯ ಅವರನ್ನು ಸಿಲುಕಿಸಲು ಪ್ರತಿಪಕ್ಷ ತನ್ನ ಎಲ್ಲಾ ಅಸ್ತ್ರಗಳನ್ನು ಒಟ್ಟುಗೂಡಿಸಿ ಪ್ರಯೋಗಿಸಲು ಸಜ್ಜಾಗಿದೆ.

## ನಂದಿಗುಡಿ : ಇಂದು ಶ್ರೀಗಳ ಸಿಂಹಾಸನಾರೋಹಣ, ಪದಾಧಿಕಾರಿಗಳ ಪದಗ್ರಹಣ, ಪ್ರತಿಭಾ ಪುರಸ್ಕಾರ



ನಂದಿಗುಡಿ ಬೃಹನ್ಮಠದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಗುರು ಕೆಂಚವೀರೇಶ್ವರ ಮಹಾಶಿವಯೋಗಿಗಳವರ ಪುಣ್ಯ ಸಂಸ್ಮರಣೆ ಮತ್ತು ಶ್ರೀ ಸಿದ್ದರಾಮೇಶ್ವರ ಶ್ರೀಗಳ 15ನೇ ವರ್ಷದ ಸೂರ್ಯ ಸಿಂಹಸನಾರೋಹಣ ಸಮಾರಂಭ ಹಾಗೂ ಶ್ರೀ ನಂದಿ ನೊಳಂಬ ಸ್ತ್ರೀ ಶಕ್ತಿ ಸಂಘಗಳ ಪದಾಧಿಕಾರಿಗಳ ಪದಗ್ರಹಣ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾನ್ನಿಧ್ಯ : ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ : ಜೆ.ಸಿ. ಮಾಧುಸ್ವಾಮಿ, ಉದ್ಘಾಟನೆ : ಬಿ.ವೈ.ವಿಜಯೇಂದ್ರ, ಉಪನ್ಯಾಸ : ಶಾಂತರಾಜ ಪಾಟೀಲ್,

ಮುಖ್ಯ ಅತಿಥಿಗಳು : ಡಾ. ಪ್ರಭಾ ಮಲ್ಲಿಕಾರ್ಜುನ್, ಬಿ.ಪಿ.ಹರೀಶ್, ಡಿ.ಜಿ.ಶಾಂತನಗೌಡ್ರು, ಪ್ರಕಾಶ್ ಕೋಳಿವಾಡ, ಯು.ಬಿ.ಬಣಕಾರ, ಜಿ.ಎಂ.ಸಿದ್ದೇಶ್ವರ ಮತ್ತಿತರರು.



## ಉಕ್ಕಡಗಾತ್ರಿಯಲ್ಲಿ ತುಂಗಭದ್ರಾ ನದಿಗೆ ಇಂದು ಮಹಾಮಂಗಳಾರತಿ

ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಸನ್ನಿಧಿಯಲ್ಲಿ ಇಂದು ಸಂಜೆ 6 ಗಂಟೆಗೆ ತುಂಗಭದ್ರಾ ನದಿಗೆ ಮಹಾಮಂಗಳಾರತಿ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಗದ್ದಿಗೆ ಟ್ರಸ್ಟ್ ಕಮಿಟಿಯ ಸುರೇಶ್ ತಿಳಿಸಿದ್ದಾರೆ.

## ಹರಿಹರ ಹಿಂದೂ ರುದ್ರಭೂಮಿಗೆ ಹೆಚ್ಚುವರಿ ಭೂಮಿಗೆ ಆಗ್ರಹಿಸಿ ಕರವೇ ಪ್ರತಿಭಟನೆ



ಹರಿಹರ, ಡಿ.7- ನಗರದ ಹಿಂದೂ ರುದ್ರಭೂಮಿಗೆ ಹೆಚ್ಚುವರಿ ಭೂಮಿ ಮಂಜೂರು ಮಾಡಿಕೊಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ)ಯ ಕಾರ್ಯಕರ್ತರು ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ರಮೇಶ್ ಮಾನೆ ಮತ್ತು ನಗರ ಘಟಕದ ಅಧ್ಯಕ್ಷ ಪ್ರೀತಮ್ ಬಾಬು ಮಾತನಾಡಿ ಕಳೆದ 60, 70 ವರ್ಷಗಳಿಂದ ನಗರದ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸುತ್ತ ಬಂದಿದ್ದು, ನಗರದ ಜನಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚು ಆಗುತ್ತಿರುವುದರಿಂದ ಈ ರುದ್ರಭೂಮಿ ಬಹಳಷ್ಟು ಚಿಕ್ಕದಾಗಿರುತ್ತದೆ. ಆದ್ದರಿಂದ ಹೆಚ್ಚುವರಿ ಭೂಮಿ ಮಂಜೂರು ಮಾಡಬೇಕಾಗಿದೆ. ಅಲ್ಲದೇ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಗೆ ಮುಖ್ಯವಾಗಿ ಭದ್ರತೆ ಒದಗಿಸಬೇಕು ಮತ್ತು ನಾಯಿಗಳ ಹಾವಳಿ ತಪ್ಪಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿ. ಮುಗ್ದಂ, ಹಾಲೇಶ್, ರುದ್ರೇಶ್, ಅಕ್ಬರ್ ಅಲಿ, ಮಹೇಶ್ ಬನ್ನಿಕೋಡು, ರಾಜು ಆಟೋ, ಶಂಕರ್ ದುರುಗೋಜಿ, ಮಂಜುನಾಥ್, ಹನುಮಕ್ಕ, ಚಂದ್ರಕಲಾ, ಲಲಿತಮ್ಮ ಗಾಯತ್ರಿ, ರೇಣುಕಾ, ಸುನೀತಾ, ಶೋಭಾ, ಅಶ್ವಿನಿ, ಪೂಜಾ, ಸುಧಾ, ಶೃತಿ, ಲಕ್ಷ್ಮಮ್ಮ ಇತರರು ಹಾಜರಿದ್ದರು.

## ಸೆಂಟ್ರಿಂಗ್ ಶೀಟ್ ಕಳ್ಳತನ: ಮೂವರ ಬಂಧನ

ದಾವಣಗೆರೆ, ಡಿ.7 - ಕಟ್ಟಡ ನಿರ್ಮಾಣಕ್ಕೆ ಬಳಸುವ ಸೆಂಟ್ರಿಂಗ್ ಶೀಟ್ ಗಳನ್ನು ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನೋರ್ವ ಆರೋಪಿ ತಲೆಮರೆಸಿಕೊಂಡಿದ್ದು ಪತ್ತೆ ಕಾರ್ಯ ಮುಂದುವರೆದಿದೆ.

ತೋಳುಹುಣಸೆ ಗ್ರಾಮದ ದಿನೇಶ್ ನಾಯ್ಕ, ಶಿವುನಾಯ್ಕ (36), ಬೀಡಿ ಬಡಾವಣೆಯ ಇಸ್ಮಾಯಿಲ್ ಜಬೀಉಲ್ಲಾ (31) ಬಂಧಿತರು. ಇವರಿಂದ ಅಂದಾಜು ಎಂಟು ಲಕ್ಷ ರೂ. ಮೌಲ್ಯದ ಸೆಂಟ್ರಿಂಗ್ ಶೀಟ್ ಹಾಗೂ ಕೃತ್ಯಕ್ಕೆ ಬಳಸಿದ ಎರಡು ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಹೆಬ್ಬಾಳು ಬಡಾವಣೆ ಗ್ರಾಮದ ಹಿಂಭಾಗದಲ್ಲಿ ರೈಲ್ವೇ ಟ್ರ್ಯಾಕ್ ಬಳಿ ಕಾಂಕ್ರೀಟ್ ಚರಂಡಿ ಮಾಡಲು ಅಳವಡಿಸಿದ್ದ ಕಬ್ಬಿಣದ 48 ಸೆಂಟರಿಂಗ್ ಮೋಲ್ಡ್ ಪ್ಲೇಟ್ಸ್‌ಗಳನ್ನು ಹಾಗೂ 24 ಆ್ಯಂಗ್ಲರ್ ಗಳನ್ನು ಕಳ್ಳತನವಾದ ಬಗ್ಗೆ ಗುತ್ತಿಗೆದಾರ ಶಿವಕುಮಾರ್ ಎಂಬುವರು ಪೊಲೀಸ್ ದೂರು ನೀಡಿದ್ದರು. ಮಹದ್ ಖಾಜ್ ಎಂಬುವರು ದೊಡ್ಡಬಾತಿಯ ಬಡಾವಣೆಯಲ್ಲಿನ ಕಾಂಕ್ರೀಟ್ ಚರಂಡಿಯನ್ನು ಮಾಡಲು ಇಟ್ಟಿದ್ದ ಕಬ್ಬಿಣದ 8 ಅಡಿ ಉದ್ದ, 2 ಅಡಿ ಅಗಲದ ಸೆಂಟ್ರಿಂಗ್ ಪ್ಲೇಟ್ ಕಳ್ಳತನವಾದ ಬಗ್ಗೆ ದೂರು ನೀಡಿದ್ದರು.

## ಸರ್ವಾಧ್ಯಕ್ಷರಾಗಿ ಪ್ರೊ.ರಾಮಚಂದ್ರಪ್ಪ

**(1ನೇ ಪುಟದಿಂದ)** ಇದೇ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಎರಡನೇ ಬಾರಿಗೆ ಚುನಾಯಿತರಾದ ಹಾಗೂ ಕಸಾಪ ಜಿಲ್ಲಾ ಪದ ನಿಮಿತ್ತ ಸದಸ್ಯ ವೀರೇಶ್ ಎಸ್. ಒಡೇನಪುರ ಅವರನ್ನು ಅಭಿನಂದಿಸಿ, ಸನ್ಮಾನಿಸಲಾಯಿತು.

ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ, ಸಂಘಟನಾ ಕಾರ್ಯದರ್ಶಿ ಸಿ.ಜಿ. ಜಗದೀಶ್ ಕೂಲಂಬಿ, ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಜಗಳೂರು ತಾಲ್ಲೂಕು ಅಧ್ಯಕ್ಷೆ ಕೆ.ಸುಜಾತಮ್ಮ, ಹರಿಹರ ತಾಲೂಕು ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ, ಚನ್ನಗಿರಿ ತಾಲ್ಲೂಕು ಅಧ್ಯಕ್ಷ ಎಲ್.ಜಿ. ಮಧುಕುಮಾರ್, ಹೊನ್ನಾಳಿ ತಾಲ್ಲೂಕು ಅಧ್ಯಕ್ಷ ಜಿ.ಮುರಿಗೆಪ್ಪಗೌಡ, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಡಿ.ಎಂ.ಹಾಲಾರಾಧ್ಯ, ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಂ.ಸುರೇಶ್, ಪ್ರಸಾದ್ ಬಂಗೇರ, ಎಸ್.ಎಂ.ಮಲ್ಲಮ್ಮ, ಬಿ.ಎಂ. ಭೈರವೇಶ್ವರ, ಸಿ.ಕೆ.ರುದ್ರಾಕ್ಷಿ ಬಾಯಿ, ಹೆಚ್.ಕೆ. ಸತ್ಯಭಾಮ ಮಂಜುನಾಥ್, ಎ.ರಿಯಾಜ್ ಅಹಮದ್, ಎಂ.ಎ.ಸುದರ್ಶನ್, ಕೆ.ಪಿ. ಮರಿಯಾಚಾರ್ ಮತ್ತಿತರರು ಸಭೆಯಲ್ಲಿದ್ದರು.

## ಎಲೆಬೇತೂರಿನಲ್ಲಿ ನಾಡಿದ್ದು ಶ್ರೀ ಸವಗದ್ದಿಗೆ ಸಂಗಮೇಶ್ವರ ಮಹಾಸ್ವಾಮಿ ಕಾರ್ತಿಕ

ದಾವಣಗೆರೆ,ಡಿ.6- ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಸವಗದ್ದಿಗೆ ಸಂಗಮೇಶ್ವರಮಹಾಸ್ವಾಮಿದೇವಸ್ಥಾನದಲ್ಲಿ ಇದೇ ದಿನಾಂಕ 9 ರ ಸೋಮವಾರ ಕಾರ್ತೀಕೋತ್ಸವ ನಡೆಯಲಿದೆ. ಬೆಳಿಗ್ಗೆ ಶ್ರೀ ಸವಗದ್ದಿಗೆ ಸಂಗಮೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಮಂಗಳಾರತಿ ನಡೆಯಲಿದೆ. ಸಂಜೆ 6.30 ಕ್ಕೆ ಮಹಾಮಂಗಳಾರತಿ, ಕಾರ್ತಿಕ ಹಚ್ಚುವುದು, ಫಳಾರ ವಿನಿಯೋಗ ನಡೆಯಲಿದೆ.

## ಎಂ.ಪಿ. ರೇಣುಕಾಚಾರ್ಯ ಪಕ್ಷದಿಂದ ಉಚ್ಚಾಟಿಸುವ ಹೇಳಿಕೆ ಖಂಡನೀಯ

ದಾವಣಗೆರೆ, ಡಿ. 7- ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂಬ ಶಾಂತರಾಜ್ ಪಾಟೀಲ್ ಅವರ ಹೇಳಿಕೆ ಖಂಡನೀಯ ಎಂದು ಬಿಜೆಪಿ ಯುವ ಮುಖಂಡ ರಾಜು ವೀರನಗೌಡ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರೇಣುಕಾಚಾರ್ಯ ಅವರು ಶಾಸಕರಾದ ಮೇಲೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ. ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ಕೋವಿಡ್ ಸಂದರ್ಭದಲ್ಲಿ ನೊಂದವರಿಗೆ ಸಹಾಯ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ ಎಂದರು.

ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕುಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಬಿಜೆಪಿ ಪಕ್ಷ ಬಲವರ್ಧನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಯಾವೊಬ್ಬ ಕಾರ್ಯಕರ್ತ ಕೂಡ ವಿರೋಧ ಮಾಡುವುದಿಲ್ಲ. ರೇಣುಕಾಚಾರ್ಯ ಅವರಿಂದಲೇ ಬೆಳಕಿಗೆ ಬಂದಿರುವ ಶಾಂತರಾಜ್ ಪಾಟೀಲ್ ಅವರಿಗೆ ರೇಣುಕಾಚಾರ್ಯ ಅವರ ಬಗ್ಗೆ ಟೀಕಿಸುವ ಯಾವುದೇ ನೈತಿಕತೆ ಇಲ್ಲ ಎಂದು ಕಿಡಿಕಾರಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರವೀಣ್ ಜಾಧವ್, ಮಂಜು ಪೈಲ್ವಾನ್, ಸುಮಂತ್, ಪ್ರಶಾಂತ್, ಮಂಜುನಾಥ್, ಕಾಶಿ, ಧರ್ಮರಾಜ್ ಉಪಸ್ಥಿತರಿದ್ದರು.



## ಕದರಮಂಡಲಗಿಯಲ್ಲಿ ಇಂದು ಕಾಂತೇಶ ಸ್ವಾಮಿ ತೆಪ್ಪೋತ್ಸವ

ಬ್ಯಾಡಗಿ ತಾಲ್ಲೂಕಿನ ಸುಕ್ಷೇತ್ರ ಕದರಮಂಡಲಗಿ ಶ್ರೀ ಆಂಜನೇಯ ಸ್ವಾಮಿಯ ತೆಪ್ಪೋತ್ಸವ ಇಂದು ರಾತ್ರಿ 10.30ಕ್ಕೆ ನಡೆಯಲಿದೆ.

## ಸಿದ್ದಿಕ್ ಹತ್ಯೆ ಪ್ರಕರಣ: ಆರೋಪಿಗಳು 16ರವರೆಗೆ ನ್ಯಾಯಾಂಗ ಬಂಧನಕ್ಕೆ

ಮುಂಬೈ, ಡಿ.7 - ಬಾಬಾ ಸಿದ್ದಿಕ್ ಹತ್ಯೆ ಪ್ರಕರಣದ ಎಂಟು ಆರೋಪಿಗಳನ್ನು ಮುಂಬೈನ ವಿಶೇಷ ಎಂಸಿಒಸಿಎ ನ್ಯಾಯಾಲಯವು ಡಿಸೆಂಬರ್ 16 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಎನ್‌ಸಿಪಿ ನಾಯಕ ಮತ್ತು ಮಹಾರಾಷ್ಟ್ರದ ಮಾಜಿ ಸಚಿವರನ್ನು ಅಕ್ಟೋಬರ್ 12 ರಂದು ಬಾಂದ್ರಾದ ನಿರ್ಮಲ್ ನಗರದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಮುಂಬೈ ಪೊಲೀಸರು ಈ ಪ್ರಕರಣದಲ್ಲಿ ಇದುವರೆಗೆ 26 ವ್ಯಕ್ತಿಗಳನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಬೇಕಾಗಿರುವವರಲ್ಲಿ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಮತ್ತು ಅವರ ಸಹೋದರ ಅನ್ಮೋಲ್ ಬಿಷ್ಣೋಯ್ ಸೇರಿದ್ದಾರೆ.

## ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಸಾವು

ದಾವಣಗೆರೆ, ಡಿ. 7- ರಸ್ತೆ ಅಪಘಾತದಲ್ಲಿ ಬೈಕ್ ಸವಾರನೊಬ್ಬ ಮೃತಪಟ್ಟಿರುವ ಘಟನೆ ತೋಳಹುಣಸೆ ರೈಲ್ವೆ ಮೇಲ್ಸೇತುವೆ ಮೇಲೆ ಶನಿವಾರ ನಡೆದಿದೆ.

ತಾಲ್ಲೂಕಿನ ಬುಳ್ಳಾಪುರ ಗ್ರಾಮದ ಪ್ರದೀಪ್ (20) ಮೃತಪಟ್ಟ ಬೈಕ್ ಸವಾರ. ಶನಿವಾರ ಬೆಳಿಗ್ಗೆ ಬುಳ್ಳಾಪುರ ಗ್ರಾಮದಿಂದ ಬೈಕ್‌ನಲ್ಲಿ ದಾವಣಗೆರೆಗೆ ಬರುವ ವೇಳೆ ಸ್ಕೂಲ್ ಬಸ್ಸೊಂದು ಬೈಕ್‌ಗೆ ಡಿಕ್ಕಿ ಹೊಡೆದು ಈ ಘಟನೆ ಸಂಭವಿಸಿದೆ ಎನ್ನಲಾಗಿದೆ. ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು, ಈ ಘಟನೆ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ :** ಈ ಘಟನೆ ತಿಳಿದ ತಕ್ಷಣವೇ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಕೆ.ಎಸ್.ಬಸವಂತಪ್ಪ ರೈಲ್ವೆ ಮೇಲ್ಸೇತುವೆ ಪರಿಶೀಲನೆ ನಡೆಸಿದರು. ರೈಲ್ವೆ ಮೇಲ್ಸೇತುವೆ ಕಳಪೆ ಕಾಮಗಾರಿಯಿಂದ ಸಾಕಷ್ಟು ಸಾವು-ನೋವು ಸಂಭವಿಸುತ್ತಿವೆ. ಮೇಲ್ಸೇತುವೆ ಮೇಲೆ ಗುಂಡಿಗಳು ಬಿದ್ದಿದ್ದು, ಇದರಿಂದ ಬೈಕ್ ಸವಾರರು, ವಾಹನಗಳ ಸವಾರರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಕೂಡಲೇ ಅಧಿಕಾರಿಗಳು ಮೇಲ್ಸೇತುವೆ ದುರಸ್ತಿಗೊಳಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಸೂಚನೆ ನೀಡಿದ್ದಾರೆ.


## ವೈಕುಂಠ ಸಮಾರಾಧನೆ ಆಹ್ವಾನ



ಆತ್ಮೀಯರೇ, ನನ್ನ ಪತ್ನಿಯಾದ

**ಶ್ರೀಮತಿ ಶಮಂತಮಣಿ ಎಫ್.ಬಿ.**

ಶಿಕ್ಷಕರು, ಕೊಕ್ಕನೂರು.

ಇವರು ದಿನಾಂಕ : 24.11.2024ನೇ ಭಾನುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಆತ್ಮಶಾಂತಿಗಾಗಿ

**'ವೈಕುಂಠ ಸಮಾರಾಧನೆ'ಯನ್ನು**

ದಿನಾಂಕ : 08.12.2024ನೇ ಭಾನುವಾರದಂದು ಕೊಕ್ಕನೂರಿನ ನಮ್ಮ ಸ್ವಗೃಹದಲ್ಲಿ ಹಮ್ಮಿಕೊಂಡಿದ್ದೇವೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ದುಃಖತಪ್ತರು : ದಾಸರ ಉದಯಕುಮಾರ್ ಮತ್ತು ಮಕ್ಕಳು ಹಾಗೂ ದಾಸರ ವಂಶಸ್ಥರು, ಕೊಕ್ಕನೂರು ಮತ್ತು ಬಂಧು-ಮಿತ್ರರು.**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಸುಮಾ ಎಂ. ನಿಧನ



ದಾವಣಗೆರೆ ಸಿಟಿ ನಿಜಲಿಂಗಪ್ಪ ಬಡಾವಣೆ ವಾಸಿ ಸಿ.ಎಂ.ಎನ್. ಬಸವರಾಜಯ್ಯನವರ ಧರ್ಮಪತ್ನಿ ಶ್ರೀಮತಿ ಸುಮಾ ಎಂ. (50) ಇವರು ದಿನಾಂಕ 07.12.2024ರ ಶನಿವಾರ ರಾತ್ರಿ 9ಕ್ಕೆ ನಿಧನರಾದರು. ಪತಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.12.2024ರ ಭಾನುವಾರ ಮಧ್ಯಾಹ್ನ 3ಗಂಟೆಗೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ರಾಸಾಯನಿಕ ಬಳಕೆಯಿಂದ ವಿಷವಾದ ಆಹಾರ

**(1ನೇ ಪುಟದಿಂದ)** ಮಲ್ಲಿಕಾರ್ಜುನ್ ಮಾತನಾಡಿ, ಲೀಡರ್‌ಗಳ ಕೊರತೆಯಿರಲ್ಲ ಫಾಲೋವರ್ ಕೊರತೆಯಿದೆ. ಎಲ್ಲಾ ಕಡೆ ಪ್ರಾಮಾಣಿಕತೆ ಕಣ್ಮರೆಯಾಗಿದೆ. ಜನಸೇವೆ ಮಾಡಲು ಮನಸ್ಸಿದ್ದರೆ ಮಾತ್ರ ರಾಜಕೀಯ ಮಾಡಬೇಕು. ಸರ್ಕಾರದ ನಿಯಮಗಳಲ್ಲಿ ಲೋಪವಾದರೆ ಹೋರಾಟ ಮಾಡಲೇಬೇಕು. ರೈತ ಭವನಕ್ಕೆ ಪರಿಣಿತರನ್ನು ಕರೆದು ಕೌಶಲ್ಯ ತರಬೇತಿ ಶಿಬಿರ ನಡೆಸಬೇಕು. ಮುಂದಿನ ಹುತಾತ್ಮರ ಜಯಂತಿ ರೈತ ಭವನದಲ್ಲಿ ನಡೆಯುವಂತಾಗಬೇಕು ಎಂದರು.

ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ಮಾತನಾಡಿ, ಹುತಾತ್ಮರ ಕಾರ್ಯಕ್ರಮಕ್ಕೆ ರೈತರ ಶಕ್ತಿಯಿಂದ ಹಣಬಂದಿದೆ. ಬೇರಾವ ಹಣ ಬಂದಿಲ್ಲ. 32 ವರ್ಷಗಳಿಂದ ನಿರಂತರ ಸೇವೆ ಮಾಡಿದ್ದೇನೆ. ಶಾಸಕರು, ಜನ ಪ್ರತಿನಿಧಿಗಳ ಸಹಕಾರ ಬೇಕು. ರೈತನ ಸ್ಥಿತಿ ಕೇಳುವವರಿಲ್ಲ. ಸಂಸದರು, ಸಚಿವರು ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡಬೇಕು. ಸಾರ್ವಜನಿಕರ ಅಹವಾಲು ಆಲಿಸಲು ತಾಕೀತು ಮಾಡಬೇಕೆಂದರು.

ಶಾಸಕ ಬಸವಂತಪ್ಪ, 32ವರ್ಷಗಳಿಂದ ನೆನೆಗುದಿಗೆ ಬಿದ್ದ ಹುತಾತ್ಮರ ಭವನದ ಕೆಲಸವನ್ನು 13 ದಿನಗಳಲ್ಲಿ ಕೊನೆಗಾಣಿಸಿದ್ದಾರೆ.

40 ಲಕ್ಷ ಕೊಡಿಸುವ ಮೂಲಕ ಸಚಿವ ಮಲ್ಲಿಕಾರ್ಜುನ ಕಾಳಜಿ ಮೆರೆದಿದ್ದಾರೆ. ಹೆಚ್ಚಿನ ಅನುದಾನ ಬಂದಾಗ ಕಾಮಗಾರಿ ಮುಂದುವರಿಸಬೇಕು. ಶಾಸಕರ ಅನುದಾನದ ಜತೆಗೆ ಮುಖ್ಯಮಂತ್ರಿಗಳಿಂದ ವಿಶೇಷ ಅನುದಾನ ಕೊಡಿಸುವೆ. ಇಪ್ಪತ್ತೆರಡು ಕೆರೆ ಯೋಜನೆಗೆ ಹೊಸದಾಗಿ ಆಧುನಿಕ, ಗುಣಮಟ್ಟದ ಪೈಪ್‌ಲೈನ್ ಹಾಕಿಸಲಾಗುವುದು. ಭತ್ತ, ಮೆಕ್ಕೆಜೋಳ ಬೆಲೆ ಕುಸಿದಿದೆ. ಕನಿಷ್ಠ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ನಿಗದಿ ಪಡಿಸಬೇಕು ಎಂದರು.

ಕೊಗ್ಗನೂರು ಹನುಮಂತಪ್ಪ ಇಪ್ಪತ್ತೆರಡು ಕೆರೆಗಳ ನೀರು ಕೆರೆಗಳಿಗೆ ಬರುತ್ತಿಲ್ಲ ಗಮನ ಹರಿಸಬೇಕು ಎಂದರು.

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ, ಅಂದಿನ ಪೊಲೀಸರು, ಶಾಸಕರು ತಪ್ಪು ಮಾಡದಿದ್ದರೆ ಸಾವು ತಪ್ಪಿಸಬಹುದಿತ್ತು. ಮಹಿಳೆ ಮುಖ್ಯಮಂತ್ರಿ ಯಾಗುವುದಾದರೆ ಪ್ರಭಾ ಅರ್ಹರು. ರೈಟ್ ಟು ಫೀಸಿಬಲ್ ವಾಟರ್, ರೈಟ್ ಟು ಹೆಲ್ತ್ ಸಿಗುವಂತಾಗಬೇಕು ಎಂದರು.

ಆನಗೋಡು ಕರಿಬಸಪ್ಪ, ಶಾಲೆಗೆ ದಾನ ನೀಡಿದ್ದು ಕೆಲವರು ಸ್ಮಾರಕಕ್ಕೆ ಕೊಡೋದು ಬೇಡ ಎಂದರೂ ನಾವು ಬೆಂಬಲಿಸಲ್ಲ. ಗ್ರಾಮ ಪಂಚಾಯತಿಯನ್ನು ಸಮಿತಿಯವರು ಕಡೆಗಣಿಸಬಾರದು ಎಂದರು. ವರ್ತಕ ಕುಸುಮ ಶೆಟ್ಟರು ಮಾತನಾಡಿದರು.

ಕಟ್ಟಡಕ್ಕೆ ಧನಸಹಾಯ ನೀಡಲು ವಾಗ್ದಾನ ಮಾಡಿದ ದಾನಿಗಳನ್ನು ಸನ್ಮಾನಿಸಲಾಯಿತು.

ಚಿನ್ನಸಮುದ್ರ ಉಮೇಶ್ ನಾಯ್ಕ ರೈತ ಗೀತೆ ಹಾಡಿದರು. ಶಾಮನೂರು ಹೆಚ್.ಆರ್. ಲಿಂಗರಾಜ್ ಸ್ವಾಗತಿಸಿ, ವಂದಿಸಿದರು. ಆವರಗೆರೆ ರುದ್ರಮುನಿ ನಿರೂಪಿಸಿದರು.

ರೈತ ಮುಖಂಡರಾದ ಹೊನ್ನೂರು ಮುನಿಯಪ್ಪ, ಹೆಚ್. ನಂಜುಂಡಪ್ಪ, ಚಿನ್ನಸಮುದ್ರ ಶೇಖರ ನಾಯ್ಕ, ಹೆದ್ನೆ ಮುರುಗೇಂದ್ರಪ್ಪ, ಬಸವನಗೌಡರು, ಕತ್ತಲಗೆರೆ ತಿಪ್ಪಣ್ಣ, ಹೊನ್ನಾಯಕನಹಳ್ಳಿ ಮುರುಗೇಂದ್ರಪ್ಪ, ಹೆಬ್ಬಾಳು ರುದ್ರಮುನಿ, ಅಣಜಿ ಚಂದ್ರಶೇಖರ್, ಸಂಗನಬಸಪ್ಪ, ನರಗನಹಳ್ಳಿ ಪೂಜಾರ್ ರುದ್ರೇಶ್ ಮತ್ತಿತರರಿದ್ದರು.

## ಶತಮಾನದಿಂದ ಗ್ರಾಮೀಣ ಜನತೆಗೆ ಎಲ್ಲಾ ವರ್ಗದ ಬಡವರಿಗೆ ಶಿಕ್ಷಣ ದಾಸೋಹ ಮಾಡುತ್ತಿರುವ

# 'ಹಂಸಭಾವಿಯ ಮೃತ್ಯುಂಜಯ ವಿದ್ಯಾಪೀಠ'




ಕಳೆದ ಶತಮಾನದ ಆದಿಯಲ್ಲಿ ಶಿಕ್ಷಣ ಪಡೆಯುವುದು ಕನಸಿನ ಮಾತಾಗಿತ್ತು. ಅದರಲ್ಲೂ ಗ್ರಾಮೀಣರಿಗೆ ಬಡವರಿಗೆ ಮರೀಚಿಕೆಯಾಗಿತ್ತು. ಇಂತಹ ಸಂದರ್ಭದಲ್ಲಿ ಹಿರೇಕೆರೂರು ತಾಲ್ಲೂಕಿನ ಹಂಸಭಾವಿ ಎಂಬ ಕುಗ್ರಾಮದಲ್ಲಿ ಶಿಕ್ಷಣದ ಬೀಜ ಮೊಳಕೆ ಹೊಡೆಯಿತು. ಅದು ಗಿಡವಾಗಿ.. ಮರವಾಗಿ... ಹೆಮ್ಮರವಾಗಿ ತಲೆಯೆತ್ತಿ ನಿಂತು ಬಡವರಿಗೆ, ಗ್ರಾಮೀಣ ಜನರಿಗೆ ಶಿಕ್ಷಣದ ಫಲವನ್ನು ಶತಮಾನದಿಂದ ನಿರಂತರವಾಗಿ ನೀಡುತ್ತಾ ಬಂದಿದೆ. ಕ್ರಿ.ಶ. 1918ರ ಆ ದಿನಗಳಲ್ಲಿ ಹಂಸಭಾವಿಯ ಜನ ಖರೀದಿ ಪತ್ರ ಬರೆಯಿಸಲು ತಾಲ್ಲೂಕು ಕೇಂದ್ರವಾಗಿದ್ದ ಪಕ್ಕದ ಕೋಡ ಗ್ರಾಮಕ್ಕೆ ಎತ್ತಿನ ಬಂಡಿ ಕಟ್ಟಿಕೊಂಡು ಹೋಗಬೇಕಿತ್ತು. ಅಲ್ಲಿ ಪತ್ರ ಬರೆಯುತ್ತಿದ್ದ ವ್ಯಕ್ತಿ ಇಂದು ನನಗೆ ಬಿಡುವಿಲ್ಲ ನಾಳೆ ಬನ್ನಿ ಎಂದಾಗ ಗ್ರಾಮಸ್ಥರು ಸಂಕಟ ಪಡುತ್ತಿದ್ದರು. ಒಂದು ಪತ್ರ ಬರೆಯುವಷ್ಟು ವಿದ್ಯೆ ನಮಗಿಲ್ಲವಲ್ಲ ಎಂದು ಕೊರಗುತ್ತಿದ್ದರು. ಶಿಕ್ಷಣದ ಮಹತ್ವ ಮನದಟ್ಟಾಗಿತ್ತು. ಆದರೆ ಆಗ ಗ್ರಾಮದಲ್ಲಿ ಹಾಗೂ ಅಕ್ಕಪಕ್ಕದಲ್ಲಿ ಶಾಲೆಗಳು ಇರಲಿಲ್ಲ. ಏನು ಮಾಡಬೇಕೆಂದು ತೋಚದ ಅಸಹಾಯಕ ಸ್ಥಿತಿ. ಇದೇ ಸಂದರ್ಭದಲ್ಲಿ ಪಕ್ಕದ ಭೋಗಾವಿ ಗ್ರಾಮಕ್ಕೆ ಧಾರವಾಡದ ಮುರುಘಾ ಮಠದ ಮೃತ್ಯುಂಜಯ ಸ್ವಾಮಿಗಳು ರುದ್ರಗೌಡ ಪಾಟೀಲರ ಮನೆಗೆ ಪೂಜೆಗೆಂದು ಬಂದಿರುತ್ತಾರೆ. ವಿಷಯ ತಿಳಿದ ಹಂಸಭಾವಿಯ ಗ್ರಾಮಸ್ಥರು ಪೂಜ್ಯರನ್ನು ಭೇಟಿ ಮಾಡಿ ಹಂಸಭಾವಿಗೂ ಆಹ್ವಾನಿಸುತ್ತಾರೆ. ಅಲ್ಲಿಗೆ ಆಗಮಿಸಿದ ಮೃತುಂಜಯ ಸ್ವಾಮಿಗಳು ಗ್ರಾಮಸ್ಥರ ಓದು, ಬರಹದ ಕಷ್ಟಗಳನ್ನು ಆಲಿಸಿ ಹಂಸಭಾವಿಯಲ್ಲಿ ಒಂದು ಶಾಲೆಯನ್ನು ಆರಂಭಿಸಲು ಮುಂದಾಗುತ್ತಾರೆ. ಅದೇ ಸಮಯದಲ್ಲಿ ಎರಡನೆಯ ಮಹಾಯುದ್ಧಕ್ಕೆ ಗ್ರಾಮಸ್ಥರು ಕಳುಹಿಸಿದ್ದ ಸಹಾಯಧನವನ್ನು ಸರ್ಕಾರ ಮರಳಿ ಕಳುಹಿಸಿರುತ್ತದೆ. ಈ ಹಣವನ್ನು ಸದುಪಯೋಗ ಮಾಡಿಕೊಳ್ಳೋಣ ಎಂದು ಗ್ರಾಮಸ್ಥರು ನಿರ್ಧರಿಸಿ ಈ ಶೈಕ್ಷಣಿಕ ಕಾರ್ಯಕ್ಕೆ ವಿನಿಯೋಗಿಸುತ್ತಾರೆ. ವೀರಶೈವ ವಿದ್ಯಾವರ್ಧಕ ಸಂಘ ಎಂದು ಆರಂಭಗೊಂಡ ಇದು ಜ್ಞಾನ ದೇಗುಲವಾಗಿ ಸುತ್ತ ಮುತ್ತಲಿನ ಹಳ್ಳಿಗಳ ವಿದ್ಯಾಸಕ್ತರನ್ನು ಬರಸೆಳೆಯುತ್ತದೆ. ಮುಂದೆ ಇದು ಮೃತ್ಯುಂಜಯ ವಿದ್ಯಾಪೀಠ ಎಂದು ಮರುನಾಮಕರಣಗೊಳ್ಳುತ್ತದೆ. ಓದಲು ಬರುತ್ತಿರುವ ಮಕ್ಕಳನ್ನು ನೋಡಿ ಗ್ರಾಮಸ್ಥರಿಗೆ ಉತ್ಸಾಹ ಮೂಡುತ್ತದೆ. ದೂರದ ಊರುಗಳಿಂದ ವಿದ್ಯಾಭ್ಯಾಸಕ್ಕೆ ಬರುವ ವಿದ್ಯಾರ್ಥಿಗಳಿಗೆ ಊಟೋಪಚಾರದ ಹೊಣೆಯನ್ನು ಹೊರಲು ಗ್ರಾಮಸ್ಥರು ಮುಂದಾಗುತ್ತಾರೆ. ಆಗ ಓದಲು ಬಂದ ಹೆಣ್ಣು ಮಕ್ಕಳಿಗೆ ಕೆಲವರು ತಮ್ಮ ಮನೆಗಳಲ್ಲಿಯೇ ಇರಿಸಿಕೊಂಡು ಓದಿಸಿದ ಉದಾರಣೆಗಳಿವೆ. ಈ ಸಮಯದಲ್ಲಿ ಪ್ರಸಾದ ನಿಲಯ ಹಾಗೂ ಹಾಸ್ಟೆಲ್‌ಗಳ ಅವಶ್ಯಕತೆಯನ್ನು ಅರಿತು, ಮೃತ್ಯುಂಜಯ ಸ್ವಾಮಿಗಳ ಸಮ್ಮತಿಯ ಮೇರೆಗೆ ಗ್ರಾಮಸ್ಥರು ಅವುಗಳನ್ನು ಪ್ರಾರಂಭಿಸಿದರು. ಪ್ರತಿ ದಿನ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ನೌಕರರು, ಗ್ರಾಮಸ್ಥರು ಸುತ್ತಲಿನ ಗ್ರಾಮಗಳಿಗೆ ಹೋಗಿ ದವಸ ಧಾನ್ಯಗಳನ್ನು ಭಕ್ತರಿಂದ ಪಡೆದು ಪ್ರಸಾದ ನಿಲಯವನ್ನು ನಡೆಸಿದರು.

ಬೆಳಗಾವಿ, ವಿಜಯಪುರ, ದಾವಣಗೆರೆ, ಚಿತ್ರದುರ್ಗ, ಹರಪನಹಳ್ಳಿ, ಬಳ್ಳಾರಿ, ಶಿವಮೊಗ್ಗ ಹೀಗೆ ದೂರದ ಊರುಗಳಿಂದ ಸಾವಿರಾರು ವಿದ್ಯಾರ್ಥಿಗಳು ಅಲ್ಲದೇ, ಪಕ್ಕದ ಮಹಾರಾಷ್ಟ್ರದಿಂದಲೂ ವಿದ್ಯಾರ್ಥಿಗಳು ಆಗಮಿಸಿ ಪ್ರಸಾದ ನಿಲಯದಲ್ಲಿದ್ದುಕೊಂಡು ವ್ಯಾಸಂಗ ಮಾಡಿದ್ದಾರೆ. ದೂರದ ಪಟ್ಟಣಕ್ಕೆ ಹೋಗಿ ಶಿಕ್ಷಣ ಪಡೆಯಲಾಗದ ವಿದ್ಯಾರ್ಥಿಗಳಿಗೆ ಇದು ವರವಾಗಿ ಗೋಚರಿಸಿತು. ಸುಮಾರು ಆರು ದಶಕಗಳವರೆಗೆ ಈ ಪ್ರಸಾದ ನಿಲಯದ ಒಲೆ ಆರಿರಲಿಲ್ಲ ಎಂದು ಇಲ್ಲಿನ ದುರ್ಗದ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ಇ.ಆರ್. ಕೆಂಚಕ್ಕನವರ್ ಹೆಮ್ಮೆಯಿಂದ ಹೇಳುತ್ತಾರೆ.

ವಿದ್ಯಾಪೀಠದ ಪ್ರಗತಿ ಹಾಗೂ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಕೊಳ್ಳಲು ಹಿರಿಯರೆಲ್ಲ ಮೇಲಿಂದ ಮೇಲೆ ವಿದ್ಯಾಪೀಠದ ಆವರಣದಲ್ಲಿ ಸೇರಿ ಚಿಂತಿಸಿ ಪರಿಹಾರ ಕಂಡುಕೊಳ್ಳುತ್ತಿದ್ದರಂತೆ. ಮೃತ್ಯುಂಜಯ ಸ್ವಾಮೀಜಿ ಬಂದಾಗಂತೂ ಅಲ್ಲಿ ಹಬ್ಬದ ವಾತಾವರಣವಿರುತ್ತಿತ್ತು. ಹೊಸ ಹೊಸ ಚಿಂತನೆಗಳ ಚರ್ಚೆಗಳಾಗುತ್ತಾ ಶರಣರ ನಡೆ, ಸಾತ್ವಿಕ ವಿಚಾರ, ಭಜನೆ, ಕೀರ್ತನೆ, ಭಕ್ತಿಗೀತೆಗಳ ಗಾಯನ, ವಚನಗಳ ವಿಶ್ಲೇಷಣೆ ಮುಂತಾದ ಕ್ರಿಯೆಗಳಿಗೆ ವಿದ್ಯಾಪೀಠದ ಆವರಣ ಸಾಕ್ಷಿಯಾಗಿ 20ನೇ ಶತಮಾನದ ಅನುಭವ ಮಂಟಪದಂತೆ ಭಾಸವಾಗುತ್ತಿತ್ತು. ಇಲ್ಲಿ ರೂಪುಗೊಂಡ ಚಿಂತನೆಗಳು ಮೈಮನಗಳಲ್ಲಿ ಬೇರೂರಿ ಸಾತ್ವಿಕ ನಡೆ-ನುಡಿಗೆ ಪ್ರೇರಣೆಯಾಗಿದ್ದರಿಂದ ಇಂದಿಗೂ ಈ ಗ್ರಾಮದಲ್ಲಿ ಜನ ಮನರಂಜನೆಗಾಗಿ ಚಲನಚಿತ್ರ ಮಂದಿರದ ಗೋಜಿಗೆ ಹೋಗಿಲ್ಲ ಎಂದು ಕೆಂಚಕ್ಕನವರ್ ಹೇಳುತ್ತಾರೆ.

ಎಂ. ವ್ಹಿ. ಪೀಠದ ಮಾತೃ ಸಂಸ್ಥೆ ದುರ್ಗದ ಪ್ರೌಢ ಶಾಲೆ ಎ.ವಿ.ಸ್ಕೂಲ್ (ಆಂಗ್ಲೋವೆರ್ನಾಕುಲರ್) ಎಂಬ ಹೆಸರಿನಿಂದ ಪ್ರಾರಂಭವಾಗಿ ಹಿರೇಕೆರೂರಿನ ಮಹಾದಾನಿ ದುರ್ಗದ ಚನ್ನಬಸಪ್ಪನವರು ವಿದ್ಯಾಪೀಠಕ್ಕೆ ನೀಡಿದ ದಾನದ ಫಲವಾಗಿ ದುರ್ಗದ ಪ್ರೌಢಶಾಲೆಯಾಗಿ ಮರುನಾಮಕರಣಗೊಂಡಿತು. ಧಾರ್ಮಿಕ ನೆಲೆಗಟ್ಟಿನ ಮೇಲೆ ನೀಡಿದ ವಿಶಿಷ್ಟ ಶೈಕ್ಷಣಿಕ ಸೇವೆಯಿಂದ ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೊಂದಾಗಿ ಉತ್ತುಂಗಕ್ಕೇರಿದ್ದು ಅಭಿಮಾನದ ಸಂಗತಿ ಆಗಿದೆ. ಇಲ್ಲಿ ಸೇವೆ ಮಾಡುತ್ತಿದ್ದ ಶಿಕ್ಷಕರು ವೃತ್ತಿಯನ್ನು ಪ್ರೀತಿಸಿ, ಗೌರವಿಸಿ, ಕೆಲಸದಲ್ಲಿ ತೃಪ್ತಿ ಕಂಡವರು. ಇವರಿಗೆ ಶಾಲೆಯೇ ಮನೆ, ವಿದ್ಯಾರ್ಥಿಗಳೇ ಮಕ್ಕಳು, ಇವರ ನಡೆ-ನುಡಿ ಆಚಾರ-ವಿಚಾರಗಳು ವಿದ್ಯಾರ್ಥಿಗಳಿಗೆ ಆದರ್ಶ. ದಿನದ ಪ್ರತಿ ಹಂತದಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಾಲಕರಾಗಿ ಗೋಚರಿಸುತ್ತಿದ್ದರು. ಪಾಲಕರಿಂದ ದೊರೆಯುವ ಪ್ರೀತಿ ತುಂಬಿದ ಲಾಲನೆ, ಪೋಷಣೆ ಶಿಕ್ಷಕರಿಂದ ದೊರೆತು ಪಾಲಕರ ಪ್ರೀತಿಯನ್ನು ಮರೆಸಿತ್ತು. ಕಲಿಕೆಯಲ್ಲಿ ಪ್ರೀತಿ ತುಂಬಿ ಜೀವನ ಶಿಕ್ಷಣ ನೀಡಿದ ಆ ಶಿಕ್ಷಕರು, ಇಂದಿಗೂ ಹಳೆ ವಿದ್ಯಾರ್ಥಿಗಳ ಮನದಲ್ಲಿ ಅಳಿಯದ ಗೌರವ ಸಂಪಾದಿಸಿ, ಪೂಜ್ಯನೀಯ ವ್ಯಕ್ತಿಗಳಾಗಿದ್ದಾರೆ. ಇಲ್ಲಿ ಮುಖ್ಯೋಪಾಧ್ಯಾಯರಾಗಿ ಸ್ಮರಣೀಯ ಸೇವೆ ಸಲ್ಲಿಸಿದ ದಿ. ಬಿ.ಜಿ. ಶೆಟ್ಟರ್ ಹಾಗೂ ದಿ. ಟಿ.ಜಿ.ಉಗ್ರಾಣಕರ ಶಿಕ್ಷಕರಿಗೆ ಭಾರತ ಸರ್ಕಾರ ರಾಷ್ಟ್ರಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕದಲ್ಲಿ ಎರಡು ರಾಷ್ಟ್ರ ಪ್ರಶಸ್ತಿಯನ್ನು ಪಡೆದ ರಾಜ್ಯದ ಏಕೈಕ ವಿದ್ಯಾಪೀಠ ಎಂಬ ಗೌರವವನ್ನು ತಂದುಕೊಟ್ಟ ದುರ್ಗದ ಪ್ರೌಢ ಶಾಲೆ ರಾಷ್ಟ್ರಮಟ್ಟದಲ್ಲಿ ಗೌರವಿಸಲ್ಪಟ್ಟಿದೆ.

ಆಗಿನ ಶಿಕ್ಷಕರು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದಂತೆ, ಇಲ್ಲಿ ವಿದ್ಯಾಭ್ಯಾಸ ಮಾಡಿದ, ಕೆಲಸ ಮಾಡಿದ ಅನೇಕ ಮಹನೀಯರು ಸ್ವಾತಂತ್ರ್ಯ ಹೋರಾಟದಲ್ಲಿ, ರಾಜಕೀಯ ಕ್ಷೇತ್ರದಲ್ಲಿ, ವಕೀಲಿ ವೃತ್ತಿಯಲ್ಲಿ, ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಮತ್ತು ಇತರೆ ವೃತ್ತಿಪರ ಕ್ಷೇತ್ರಗಳಲ್ಲಿ ಬಹುದೊಡ್ಡ ಹೆಸರು ಮಾಡಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರೊಡನೆ ತೊಡಗಿಸಿಕೊಂಡ ಮೈಲಾರ ಮಹಾದೇವಪ್ಪನವರು ಇಲ್ಲಿಯ ಹಳೆಯ ವಿದ್ಯಾರ್ಥಿ. ಅದೇ ರೀತಿ 1930ರ ಆಸುಪಾಸಿನಲ್ಲಿ ಇಲ್ಲಿ ಕೆಲವು ತಿಂಗಳು ಪ್ರಾಂಶುಪಾಲರಾಗಿದ್ದ ಕೆ. ಎಫ್. ಪಾಟೀಲರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರಲ್ಲದೇ ಮುಂದೆ ರಾಜಕೀಯ ಕ್ಷೇತ್ರದಲ್ಲೂ ಹೆಸರು ಮಾಡಿ ಆಗಿನ ಬಾಂಬೆ ರಾಜ್ಯದ ಸರಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ಈ ಮೃತ್ಯುಂಜಯ ವಿದ್ಯಾಪೀಠದ ಬಗ್ಗೆ 'ಹಂಸಭಾವಿಯ ಹಂಸ' ಎಂಬ ಲೇಖನವನ್ನು ಅವರು ಬರೆದಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಟಿ. ಆರ್. ನೆಶ್ವಿಯವರು ನಂತರ ಸಂಸದರಾಗಿ ಸಂಸದೀಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ವಿಧಾನಸಭಾಧ್ಯಕ್ಷರಾಗಿದ್ದ ರಾಜಕೀಯ ಮುತ್ಸದ್ದಿ ದಿ. ಬಿ.ಜಿ. ಬಣಕಾರ್ ಕೂಡ ಇಲ್ಲಿನ ಹಳೆಯ ವಿದ್ಯಾರ್ಥಿ. ಇದೇ ರೀತಿಯಲ್ಲಿ ಅವರ ಪುತ್ರರಾದ ಹಿರೇಕೆರೂರು ಶಾಸಕ ಯು.ಬಿ. ಬಣಕಾರ್, ಇಲ್ಲಿ ವ್ಯಾಸಂಗ ಮಾಡಿದ್ದಾರೆ. ಡಿ.ಎಂ. ಸಾಲಿ, ಬನ್ನಿಕೋಡು, ನೆಹರು ಓಲೇಕಾರ ಇವರುಗಳಲ್ಲದೆ ಹಲವು ರಾಜಕೀಯ ಮುಖಂಡರು ಇಲ್ಲಿ ಶಿಕ್ಷಣ ಪಡೆದಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಮೌಲ್ಯಾಧಾರಿತ ಸೇವೆ ಮಾಡುತ್ತಿರುವ ಡಾ. ಎಸ್.ಎಂ. ಎಲಿ ಮಹಾ ಮಾನವನಾಗಿ ರೂಪುಗೊಂಡಿದ್ದೇ ಇಲ್ಲಿ. ಇವರಂತೆ ನೂರಾರು ತಜ್ಞ ವೈದ್ಯರು ಮೂಲ ಶಿಕ್ಷಣ ಪಡೆದದ್ದು ಈ ವಿದ್ಯಾಪೀಠದಿಂದ. ಬಾಗಲಕೋಟೆಯ ಡಾ.ಬಸವರಾಜ್ ಕೆರೂಡಿ, ದಾವಣಗೆರೆಯ ಡಾ. ಕೆ.ಎಸ್. ಮಾವಿನತೋಪ, ಬೆಳಗಾವಿ ಕೆ.ಎಲ್.ಇ ಆಸ್ಪತ್ರೆಯ ಮೈಕ್ರೋಬಯಾಲಜಿ ಪ್ರೊಫೆಸರ್, ಹಾಲಿ ಆಲ್ ಇಂಡಿಯಾ ಮೈಕ್ರೋಬಯಾಲಜಿ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷ ಡಾ. ಮಹಾಂತೇಶ್ ನಾಗಮೋತಿ ಮುಂತಾದವರನ್ನು ಹೆಸರಿಸಬಹುದು. ಅದೇ ರೀತಿಯಲ್ಲಿ ನಾಡಿನ ಖ್ಯಾತ ವಕೀಲರಿಗೆ, ಇಂಜಿನಿಯರ್ ಗಳಿಗೆ ಅಕ್ಷರ ಕಲಿಸಿದ ಜಾಗವಿದು. ರಾಣೇಬೆನ್ನೂರಿನ ಖ್ಯಾತ ವಕೀಲ ಕೊಟ್ರೇಶಪ್ಪ ಬಂದಮ್ಮನವರ ಮತ್ತು ಅವರ ಸಹೋದರ-ಸಹೋದರಿಯರು ಈ ವಿದ್ಯಾಪೀಠದಲ್ಲಿ ವ್ಯಾಸಂಗ ಮಾಡಿದ್ದಾರೆ. ಅಮೆರಿಕಾದ ಸಾಫ್ಟ್‌ವೇರ್ ಉದ್ಯಮಿ ಬಸವರಾಜ್ ಉಳ್ಳಾಗಡ್ಡಿ, ದಾವಣಗೆರೆಯ ಹೆಸರಾಂತ ಇಂಜಿನಿಯರ್ ಆರ್.ಎಸ್. ವಿಜಯಾನಂದ್, ಧಾರವಾಡದ ಎಸ್.ಡಿ.ಎಂ ಇಂಜಿನಿಯರಿಂಗ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕ ಡಾ.ಮೃತ್ಯುಂಜಯ ಕಪ್ಪಾಳಿ ಮುಂತಾದವರು ತಮ್ಮ ಮೂಲ ಶಿಕ್ಷಣ ಪಡೆದದ್ದು ಇದೇ ಸಂಸ್ಥೆಯಲ್ಲಿ. ರಂಗ ದಿಗ್ಗಜ ನಾಡೋಜ ಏಣಗಿ ಬಾಳಪ್ಪನವರು ನಾಟಕ ಕಂಪನಿಯನ್ನು ಕಟ್ಟಿಕೊಂಡು ಊರೂರು ಅಲೆಯುತ್ತಿರಬೇಕಾದರೆ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ವಿದ್ಯಾಪೀಠವನ್ನು ಆಯ್ಕೆ ಮಾಡಿಕೊಂಡಿದ್ದರು.

ರಾಷ್ಟ್ರಪತಿಗಳಿಂದ ವಿಶಿಷ್ಠ ಸೇವಾ ಪದಕವನ್ನು ಪಡೆದಿರುವ ಇಬ್ಬರೇ ಕನ್ನಡಿಗರಲ್ಲಿ ಒಬ್ಬರಾಗಿರುವ ಏರ್ ಕಮ್ಯಾಂಡರ್ ಅರುಣ್‌ಕುಮಾರ್ ಎಸ್. ಬೇವಿನಮರದ್ ಪ್ರಸ್ತುತ ಕರ್ನಾಟಕ ಮತ್ತು ಗೋವಾ ರಾಜ್ಯದ ಎನ್‌ಸಿಸಿ ಮುಖ್ಯಸ್ಥರಾಗಿದ್ದಾರೆ. ಅವರು ಸಹ ತಮ್ಮ ಮೂಲ ವಿದ್ಯಾಭ್ಯಾಸವನ್ನು ಇಲ್ಲಿಯೇ ಮಾಡಿದ್ದಾರೆ. ಅವರ ತಂದೆ ಇದೇ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ನಿವೃತ್ತಿ ಹೊಂದಿದ್ದಾರೆ.

ಪ್ರಸ್ತುತ ದಕ್ಷಿಣ ಚೀನಾ ದೇಶದಲ್ಲಿ ಭಾರತದ ರಾಯಭಾರಿಯಾಗಿರುವ ಭಾರತೀಯ ವಿದೇಶಾಂಗ ಸೇವಾ ಅಧಿಕಾರಿ ಶಂಭು ಹಕ್ಕಿ ತಮ್ಮ ಶಾಲಾ ದಿನಗಳನ್ನು ಈ ವಿದ್ಯಾಪೀಠದಲ್ಲಿ ಕಳೆದದ್ದನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಹೀಗೆ ಸಹಸ್ರಾರು ಪ್ರತಿಭಾವಂತರಿಗೆ ಈ ಸಂಸ್ಥೆ ಮೌಲ್ಯಯುತ ಶೈಕ್ಷಣಿಕ ಪೀಠಿಕೆಯಾಗಿದೆ.

ಗ್ರಾಮೀಣ ಭಾಗದ ಶಿಕ್ಷಣ ಸಂಸ್ಥೆ ಈ ಮಟ್ಟದಲ್ಲಿ ಬೆಳೆಯಲು ಆಡಳಿತ ಮಂಡಳಿ ಅನುಸರಿಸಿಕೊಂಡು ಬಂದಿರುವ ಕಟ್ಟುನಿಟ್ಟಾದ ಆಡಳಿತ ಇದಕ್ಕೆ ಸಾಕ್ಷಿಯಾಗಿದೆ. ಕರ್ನಾಟಕದಲ್ಲಿ ಶಿಕ್ಷಣಕಾಶಿ ಎಂಬ ಹೆಗ್ಗಳಿಕೆ ಹೊಂದಿ ಪ್ರಭಾವಿ ಶಿಕ್ಷಣ ಸಂಸ್ಥೆಯಾಗಿ ಬೆಳೆದ ವಿದ್ಯಾಪೀಠಕ್ಕೆ ಆಗ ವಸಂತಕಾಲ. ಸಾಧನೆಗೆ, ಹೊಗಳಿಕೆಗೆ ಗರಿಗೆದರಿ ತಲೆ ಎತ್ತಿನಿಂತ ಕಾಲವದು. ನಾಡಿನ ಬೇರೆ-ಬೇರೆ ಸ್ಥಳಗಳಲ್ಲಿ ವಿದ್ಯಾಪೀಠದ ಅಂಗ ಸಂಸ್ಥೆಗಳನ್ನು ಸ್ಥಾಪಿಸುವಂತೆ ಬೇಡಿಕೆ ಹೆಚ್ಚಾಗಿತ್ತು. ಆಡಳಿತ ಮಂಡಳಿಯವರು ಆ ಬೇಡಿಕೆಗೆ ಅನುಮತಿ ನೀಡಿದ್ದರೆ ಈಗಿನ ಹಾವೇರಿ ಜಿಲ್ಲೆಯ ತುಂಬಾ ಮೃತ್ಯುಂಜಯ ವಿದ್ಯಾಪೀಠದ ಅಂಗ ಸಂಸ್ಥೆಗಳೇ ಇರುತ್ತಿದ್ದವು. ಶಿಕ್ಷಣದ ಗುಣಮಟ್ಟ ಕಾಪಾಡಿಕೊಂಡು ಹೋಗುವ ಉದ್ದೇಶದಿಂದ ಆ ಬೇಡಿಕೆ ಗಳನ್ನು ಮನ್ನಿಸದೇ ಏನೇ ಬೆಳೆಸಿದರೂ ಹಂಸಭಾವಿಯಲ್ಲಿಯೇ ಬೆಳೆಯಲಿ ಎಂದು ತೀರ್ಮಾನಿಸಿ ಅದರ ಫಲವಾಗಿ; 1918 ರಲ್ಲಿ ದುರ್ಗದ ಪ್ರೌಢ ಶಾಲೆ, 1961 ರಲ್ಲಿ ನಾಗುಬಾಯಿ ಮಾಮಲೇ ದೇಸಾಯಿ ಬಾಲಿಕಾ ಪ್ರೌಢಶಾಲೆ, 1967 ರಲ್ಲಿ ಮಹಾಂತಸ್ವಾಮಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿ ಪೂರ್ವ ಮತ್ತು ಪದವಿ ಕಾಲೇಜು, 2003 ರಲ್ಲಿ ಪದವಿ ಪೂರ್ವ ಕಾಲೇಜು ಪ್ರತ್ಯೇಕಗೊಂಡು ಕಾರ್ಯ ನಿರ್ವಹಿಸುತ್ತಿದೆ, 1982 ರಲ್ಲಿ ರೂರಲ್ ಪಾಲಿಟೆಕ್ನಿಕ್ ಕಾಲೇಜು, 1988-89 ರಲ್ಲಿ ಮೃತ್ಯುಂಜಯ ಕಿರಿಯ ಪ್ರಾಥಮಿಕ ಶಾಲೆ, 2004-05 ರಲ್ಲಿ ಡಿ.ಇ,ಡಿ ಕಾಲೇಜ. 2014-15 ರಲ್ಲಿ ಶ್ರೀ ಶಿವಯೋಗೀಶ್ವರ ಆಂಗ್ಲಮಾಧ್ಯಮ ಶಾಲೆ. ಹೀಗೆ ಎಂಟು ಅಂಗ ಸಂಸ್ಥೆಗಳನ್ನು ಒಂದೇ ಆವರಣದಲ್ಲಿ ಹೊಂದಿ ವಿದ್ಯಾರ್ಜನೆಯ ಆಕರ್ಷಣೆಯ ಕೇಂದ್ರವಾಗಿ ವಿದ್ಯಾಪೀಠ ಬೆಳೆದಿದೆ. ಮೃತ್ಯುಂಜಯ ವಿದ್ಯಾಪೀಠದ ಶತಮಾನೋತ್ಸವದ ಜೊತೆಗೆ ಸ್ಥಾಪಿತವಾದ ದುರ್ಗದ ಪ್ರೌಢಶಾಲೆ ನೂರು ವಸಂತಗಳನ್ನು ಪೂರ್ಣಗೊಳಿಸಿ ಉತ್ಸಾಹ ಇಮ್ಮಡಿಗೊಳಿಸಿದೆ.

ಮಹಾಂತಸ್ವಾಮಿ ಪದವಿ ಮಹಾವಿದ್ಯಾಲಯ ಮತ್ತು ನಾಗೂಬಾಯಿ ಮಾಮಲೇ ದೇಸಾಯಿ ಬಾಲಿಕಾ ಪ್ರೌಢಶಾಲೆ 50 ವರ್ಷ ಪೂರೈಸಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಹಾಗೆಯೇ ರೂರಲ್ ಪಾಲಿಟೆಕ್ನಿಕ್ ಮಹಾವಿದ್ಯಾಲಯ ಹಾಗೂ ಮೃತ್ಯುಂಜಯ ಕಿರಿಯ ಪ್ರಾಥಮಿಕ ಶಾಲೆ 25 ವರ್ಷ ಪೂರ್ಣಗೊಳಿಸಿ ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಆಡಳಿತ ಮಂಡಳಿ ಯವರ ಅವಿರತ ಶ್ರಮ, ಪ್ರಗತಿಪರ ಚಿಂತನೆಗಳು ದಾನಿಗಳ ಸಹಕಾರ ವಿದ್ಯಾಪೀಠದ ಬೆಳವಣಿಗೆ ಗಟ್ಟಿ ನೆಲೆ ಕಲ್ಪಿಸಿವೆ.

1990ರಲ್ಲಿ ಒಂದು ವರ್ಷ ಇಲ್ಲಿನ ರೂರಲ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಕೆಲಸ ಮಾಡಿದ್ದು, ನನ್ನ ಭಾಗ್ಯ. ■

## ಹರಿದು ಬರಲಿದೆ ಅಭಿಮಾನದ ಕೊಡುಗೆ...

ಶತಮಾನದಿಂದಲೇ ಬಡವರಿಗೆ, ಗ್ರಾಮೀಣ ಪ್ರದೇಶದ ಜನರಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಿರುವ ಹಂಸಭಾವಿಯ ಮೃತ್ಯುಂಜಯ ವಿದ್ಯಾಪೀಠಕ್ಕೆ ಸಹಾಯ ಮಾಡಬೇಕೆಂದು ಅಲ್ಲಿ ವ್ಯಾಸಂಗ ಮಾಡಿರುವ ಹಳೆಯ ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಪ್ರೇಮಿಗಳು ಮನಸ್ಸು ಮಾಡಿದ್ದಾರೆ. ಮೂಲತಃ ಧೀಮಂತರ ದಾನದಿಂದ ಆರಂಭವಾಗಿರುವ ಈ ಪೀಠ ವಿದ್ಯೆಯನ್ನು ವ್ಯಾಪಾರೀಕರಣ ಮಾಡದೆ ತತ್ವಾಧಾರಿತ ಶಿಕ್ಷಣವನ್ನು ಎಲ್ಲಾ ವರ್ಗದ ಗ್ರಾಮೀಣ ಜನತೆಗೆ ನೀಡುತ್ತಿದೆ. ಹೆತ್ತವರು ಜನ್ಮ ಕೊಟ್ಟರೆ, ಹಂಸಭಾವಿಯ ಮೃತ್ಯುಂಜಯ ವಿದ್ಯಾಪೀಠ ಉತ್ತಮ ಶಿಕ್ಷಣದೊಂದಿಗೆ ಮೌಲ್ಯಯುತ ಜೀವನ ಕೊಡುತ್ತಿದೆ. ಮೃತ್ಯುಂಜಯ ವಿದ್ಯಾಪೀಠ ನಮ್ಮ ಜೀವನವನ್ನು ರೂಪಿಸಿದೆ ಎಂದು ನಾವು ಹೆಮ್ಮೆಯಿಂದ ಹೇಳಬಯಸುತ್ತೇವೆ.

ಅದ್ದರಿಂದ ಈ ವಿದ್ಯಾಪೀಠಕ್ಕೆ ನಾವು ನಮ್ಮ ಅಭಿಮಾನದ ಕೊಡುಗೆಯನ್ನು ನೀಡುವುದರ ಮೂಲಕ ನಮ್ಮ ಋಣವನ್ನು ತೀರಿಸಲು ಪ್ರಯತ್ನಿಸುತ್ತೇವೆ ಎಂದು ಹೇಳಿರುವ ಅವರು ಆ ಕೊಡುಗೆಯಿಂದ ಹಲವಾರು ಉಪಯುಕ್ತ ಕೆಲಸವನ್ನು ವಿದ್ಯಾಪೀಠ ಮಾಡುವಂತಾಗಲಿ ಎಂದು ಆಶಿಸಿದ್ದಾರೆ. ಇದೇ ರೀತಿ ಹಿತೈಷಿಗಳಿಗೆ, ಹಳೆಯ ವಿದ್ಯಾರ್ಥಿಗಳಿಗೆ ಮನವಿಯನ್ನು ಮಾಡಲಾಗಿದೆ.

ಆಸಕ್ತರು ಆನ್‌ಲೈನ್ ಬ್ಯಾಂಕಿಂಗ್ ಮೂಲಕ ದೇಣಿಗೆ ನೀಡಬಹುದು. ನೀವು ಆನ್‌ಲೈನ್ ಬ್ಯಾಂಕಿಂಗ್ ಅನ್ನು ಹೊಂದಿಲ್ಲದಿದ್ದರೆ ದಯವಿಟ್ಟು ಚೆಕ್ ಅನ್ನು ಬರೆದು ಅದನ್ನು MVP ಮುಖ್ಯ ಕಚೇರಿ ವಿಳಾಸಕ್ಕೆ ಅಂಚೆ ಮೂಲಕ ಕಳಿಸಬಹುದು.

1 ಕಂಚಿನ ದಾನಿ: 1 ಲಕ್ಷ ರೂಪಾಯಿ
2 ಬೆಳ್ಳಿ ದಾನಿ: 2 ಲಕ್ಷ ರೂಪಾಯಿ
3 ಚಿನ್ನ ದಾನಿ: 5 ಲಕ್ಷ ರೂಪಾಯಿ
4 ಪ್ಲಾಟಿನಂ ದಾನಿ: 10 ಲಕ್ಷ ರೂಪಾಯಿ
5 ವಜ್ರ ದಾನಿ: 25 ಲಕ್ಷ ರೂಪಾಯಿ

ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಾಗಿರುವ ಯಾವುದೇ ಮೊತ್ತವನ್ನು ದೇಣಿಗೆಯಾಗಿ QR ಕೋಡ್ ಮೂಲಕ ಸಂತೋಷದಿಂದ ಸ್ವೀಕರಿಸಲಾಗುವುದು.

ದೇಣಿಗೆಗೆ ಸಂಬಂಧಿಸಿದ ವೆಬ್‌ಸೈಟ್ ಲಿಂಕ್ ಇಲ್ಲಿ ನೀಡಲಾಗಿದೆ:
https://mvpeetha.org/donation/

ದೇಣಿಗೆ ನೀಡುವವರು ನಿಮ್ಮ ಪೂರ್ಣ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, WhatsApp ಸಂಖ್ಯೆ, ಮಿಂಚಂಚೆ (ಇಮೇಲ್), MVP ಯ ಯಾವ ಸ್ಕೂಲ್, ಕಾಲೇಜು/ಸಂಸ್ಥೆಯಿಂದ ಶಿಕ್ಷಣ ಪಡೆದು ಉತ್ತೀರ್ಣರಾದ ವರ್ಷ. ಈ ಎಲ್ಲಾ ಮಾಹಿತಿಯನ್ನು ಇಮೇಲ್ ಮಾಡಿರಿ:
donations@mvpeetha.org

ನಿಮಗೆ ಇಮೇಲ್ ಮೂಲಕ ರಶೀದಿಯನ್ನು ಕಳುಹಿಸಲಾಗುತ್ತದೆ.

ಯಾವುದೇ ಸಂದೇಹಗಳಿದ್ದಲ್ಲಿ ದಯವಿಟ್ಟು ಈ ಕೆಳಗಿನ ವ್ಯಕ್ತಿಗಳನ್ನು ಸಂಪರ್ಕಿಸಿ:

1 ಸತೀಶ್ -9480620680
2 ಮಲ್ಲಿಕಾರ್ಜುನ-90089 22872
3 ವಿಜಯಾನಂದ- 9845222114
4 ಬಸವರಾಜ -9008034885

✍ ಅರುಣ್‌ಕುಮಾರ್ ಆರ್.ಟಿ.





### ಗ್ರಾಮೀಣ ಜನತೆಗೆ ಮೃತ್ಯುಂಜಯ ವಿದ್ಯಾಪೀಠ ಒಂದು ವರದಾನ.

1918 ರಿಂದ ಆರಂಭವಾದ ಈ ವಿದ್ಯಾಸಂಸ್ಥೆಯ ಉದ್ದೇಶ ಮೌಲ್ಯಾಧಾರಿತ ಶಿಕ್ಷಣ, ತತ್ವಾಧರಿತ ಶಿಕ್ಷಣ, ಚಾರಿತ್ರ್ಯಿಕ ಶಿಕ್ಷಣ ನೀಡುವುದು. ಯಾವುದೇ ಜಾತಿ, ಮತ ಪಂಥಗಳನ್ನು ನೋಡದೇ ಎಲ್ಲಾ ಜನಾಂಗದವರಿಗೂ ಅದರಲ್ಲೂ ಬಡವರಿಗೆ, ಗ್ರಾಮೀಣ ಜನತೆಗೆ ಶಿಕ್ಷಣ ನೀಡುತ್ತಿರುವ ಅಪರೂಪದ ಸಂಸ್ಥೆ ಇದು. ಇಲ್ಲಿ ವಿದ್ಯಾಭ್ಯಾಸ ಮಾಡಿ ಹೋದ ವಿದ್ಯಾರ್ಥಿಗಳು ದೇಶ - ವಿದೇಶಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ನಾವೆಲ್ಲ ಈ ವಿದ್ಯಾಪೀಠವನ್ನು ಸ್ಥಾಪನೆ ಮಾಡಿದ ಹಿರಿಯರಿಗೆ ಹಾಗೂ ಮೃತ್ಯುಂಜಯ ಸ್ವಾಮಿಗಳಿಗೆ ಋಣಿಯಾಗಿದ್ದೇವೆ.

❐ ಡಾ. ಎಸ್.ಎಂ. ಎಲಿ, ಗೌರವಾಧ್ಯಕ್ಷರು.



ಬರುವ ಡಿಸೆಂಬರ್ 9ರಂದು ನಡೆಯಲಿರುವ ಮೃತ್ಯುಂಜಯ ವಿದ್ಯಾಪೀಠದ ಶತಮಾನದ ಸಂಭ್ರಮಕ್ಕೆ ಸುತ್ತೂರು ಜಗದ್ಗುರುಗಳು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಧಾರವಾಡ ಮುರುಘಾ ಮಠದ ಡಾ. ಮಲ್ಲಿಕಾರ್ಜುನ ಮಹಾ ಸ್ವಾಮಿಗಳು ಹಾಗೂ ಶಿರಾಳಕೊಪ್ಪದ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ಇವರ ಸಮ್ಮುಖದಲ್ಲಿ ರಾಜ್ಯದ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ್ ಹೊರಟ್ಟಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

❐ ಪಿ.ವಿ.ಕೆರೂಡಿ, ಕಾರ್ಯಾಧ್ಯಕ್ಷರು



### ಹಕ್ಕ - ಬುಕ್ಕರ ಉತ್ಸಾಹ

70ರ ದಶಕದಲ್ಲಿ ದುರ್ಗದ ಹೈಸ್ಕೂಲಿನ ಹಕ್ಕ-ಬುಕ್ಕ ಎಂದೇ ಖ್ಯಾತರಾಗಿದ್ದ ದಾವಣಗೆರೆಯ ಆರ್. ಎಸ್. ವಿಜಯಾನಂದ್ ಮತ್ತು ಬನವಾಸಿಯ ಬಸವರಾಜ್ ಉಳ್ಳಾಗಡ್ಡಿ ಇವರದ್ದು ಅಪರೂಪದ ಜೋಡಿ. ಐದು ವರ್ಷಗಳ ಕಾಲ ಈ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮಾಡಿದ ಈ ಪ್ರತಿಭಾವಂತರು. ಈಗಲೂ ಈ ವಿದ್ಯಾಸಂಸ್ಥೆಯೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದಾರೆ. ಕಳೆದ ಎರಡು ತಿಂಗಳಿಂದಲೂ ಈ ಸಂಸ್ಥೆಯ ಶತಮಾನೋತ್ಸವ ಸಂಭ್ರಮಕ್ಕೆ ಹಗಲಿರುಳು ಶ್ರಮಿಸುತ್ತಿದ್ದಾರೆ. ದಾವಣಗೆರೆಯಲ್ಲಿ ಸಿವಿಲ್ ಇಂಜಿನಿಯರ್ ಆಗಿ ಹೆಸರು ಮಾಡಿರುವ ವಿಜಯಾನಂದ್, ಈ ವಿದ್ಯಾಪೀಠದ ಹಾಲಿ ಉಪಾಧ್ಯಕ್ಷರಾಗಿದ್ದಾರೆ. ಅಮೆರಿಕದಲ್ಲಿ ಸಾಫ್ಟ್‌ವೇರ್ ಉದ್ಯಮಿಯಾಗಿರುವ ಬಸವರಾಜ್ ಉಳ್ಳಾಗಡ್ಡಿ ಈ ವಿದ್ಯಾಪೀಠದ ಆಡಳಿತ ಮಂಡಳಿ ನಿರ್ದೇಶಕರಾಗಿದ್ದಾರೆ. ನಾವಿಬ್ಬರೂ ಜೀವನದಲ್ಲಿ ನೆಲೆ ನಿಲ್ಲಲು ಹಾಗೂ ಉನ್ನತ ಸ್ಥಾನಕ್ಕೆ ಬರಲು ಈ ವಿದ್ಯಾಪೀಠ ಮುಖ್ಯ ಬುನಾದಿಯನ್ನು ಹಾಕಿಕೊಟ್ಟಿದೆ. ಆದ್ದರಿಂದ ಈ ಸಂಸ್ಥೆಯ ಸೇವೆಯಲ್ಲಿ ಕೈಜೋಡಿಸಲು ನಾವು ಮುಂದಾಗಿದ್ದೇವೆ. ಮೃತ್ಯುಂಜಯ ವಿದ್ಯಾಪೀಠದ ಶತಮಾನೋತ್ಸವ ಸಂಭ್ರಮಕ್ಕೆ ಈ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರ ಜೊತೆಗೆ ಇಲ್ಲಿಯ ಶಾಲಾ-ಕಾಲೇಜುಗಳ ನಿವೃತ್ತ ಹಾಗೂ ಹಾಲಿ ಕೆಲಸ ಮಾಡುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳು ಉತ್ಸಾಹ ಭರಿತರಾಗಿ ತೊಡಗಿಸಿಕೊಂಡಿರುವುದನ್ನು ನೋಡಿ ನಮಗೂ ಹುಮ್ಮಸ್ಸು ಮೂಡಿದೆ. ಆದ್ದರಿಂದ ನಾನು ಪ್ರತಿದಿನ ದಾವಣಗೆರೆಯಿಂದ ಬಂದು ಇಲ್ಲಿಯ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದೇನೆ. ಹಾಗೂ ಬಸವರಾಜ್ ಅಮೆರಿಕದಲ್ಲಿರುವ ತನ್ನ ಕೆಲಸಕ್ಕೆ ಎರಡು ತಿಂಗಳು ರಜೆ ಹಾಕಿ ಬಂದಿದ್ದಾರೆ ಎನ್ನುತ್ತಾರೆ ವಿಜಯಾನಂದ್. ●



# ಪಾಲಿಕೆಯಲ್ಲಿ ಪ್ರತಿಧ್ವನಿಸಿದ 'ಹಂದಿ, ನಾಯಿಗಳ' ಸಮಸ್ಯೆ



ದಾವಣಗೆರೆ, ಡಿ. 7- ನಗರದ ಬಹುತೇಕ ಬಡಾವಣೆಗಳಲ್ಲಿ ಹಂದಿ, ನಾಯಿಗಳ ಕಾಟದಿಂದ ಮಕ್ಕಳು, ವಯೋವೃದ್ಧರ ಓಡಾಟಕ್ಕೆ ತುಂಬಾ ತೊಂದರೆಯಾಗಿದ್ದು, ಆರೋಗ್ಯ ಸಮಸ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ ಎಂದು ಸಭೆಯಲ್ಲಿ ಹಾಜರಿದ್ದ ಬಹುತೇಕರು ದೂರಿದರು.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ನಗರದಲ್ಲಿನ ಸಮಸ್ಯೆಗಳ ಬಗ್ಗೆ ಅನೇಕರು ಬೆಳಕು ಚೆಲ್ಲಿದರು.

'ಜಲಸಿರಿ' ಯೋಜನೆಯಡಿ ರಸ್ತೆಗಳ ಬದಿಯಲ್ಲಿ ಗುಂಡಿಗಳನ್ನು ತೆಗೆದಿದ್ದು, ಇದುವರೆಗೂ ಮುಚ್ಚದೇ ಹಾಗೆಯೇ ಬಿಡಲಾಗಿದೆ. ಇದರಿಂದ ಸಾಕಷ್ಟು ಅನಾಹುತಗಳಾಗುತ್ತಿದ್ದು, ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಪಾಲಿಕೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳನ್ನು ಆಗ್ರಹಿಸಲಾಯಿತು.

ಮಹಾಪೌರ ಕೆ. ಚಮನ್ ಸಾಬ್ ಮಾತನಾಡಿ, ಮಾಲೀಕರು ತಮ್ಮ ನಿವೇಶನಗಳನ್ನು ಸ್ವಚ್ಛವಾಗಿಟ್ಟುಕೊಳ್ಳದಿದ್ದರೆ ಪಾಲಿಕೆ ದಂಡ ವಿಧಿಸಲಿದೆ. ಈ ಬಗ್ಗೆ ಶೀಘ್ರದಲ್ಲಿಯೇ ಕ್ರಮ ಜರುಗಿಸಲಾಗುವುದು. ಈ ಕಾರ್ಯಕ್ಕೆ 40 ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಒಂದು ವಾರ್ಡ್‌ಗೆ ನಾಲ್ಕು ಟ್ರ್ಯಾಕ್ಟರ್‌ಗಳು, ಜೆಸಿಬಿ ಮೂಲಕ ಬಡಾವಣೆಯ ರಸ್ತೆಗಳಿಗೆ ಅಡ್ಡಲಾಗಿ ಇಟ್ಟಿರುವ ಮರಳಿನ ಚೀಲಗಳು, ಜೆಲ್ಲಿಕಲ್ಲಿನ ಚೀಲ, ಹೆಂಚುಗಳು ಸೇರಿದಂತೆ ಹಳೆಯ ವಸ್ತುಗಳನ್ನೆಲ್ಲಾ ಸ್ವಚ್ಛಗೊಳಿಸಲಾಗುವುದು ಎಂದರು.

ವಿದ್ಯಾರ್ಥಿ ಭವನದ ಬಳಿ ಯಥೇಚ್ಛವಾಗಿ ಗುಂಡಿಗಳು ಬಿದ್ದಿದ್ದು, ನಿತ್ಯ ಅಪಘಾತಗಳಾಗುತ್ತಿವೆ. ವಾಹನಗಳ ಸಂಚಾರಕ್ಕೆ ತುಂಬಾ ಅಡ್ಡಿಯಾಗುತ್ತಿದೆ. ಪಾಲಿಕೆ ಎದುರು ಇರುವ ಅಂಡರ್ ಪಾಸ್ ನಲ್ಲಿ ಮಳೆ ನೀರು ನಿಂತು ಸಂಚಾರಕ್ಕೆ ತೊಂದರೆಯಾಗುತ್ತದೆ. ಈ ಸಮಸ್ಯೆ ತುಂಬಾ ದಿನಗಳಿಂದ ಇದ್ದು, ಸಮಸ್ಯೆ ಪರಿಹರಿಸುವಂತೆ ನಾಗರಿಕರೊಬ್ಬರ ಪ್ರಶ್ನೆಗೆ ಉತ್ತರಿಸಿದ ಆಯುಕ್ತರಾದ ರೇಣುಕ ಅವರು, ಮಳೆ ಬಂದಾಗ ಒಂದೆರಡು ಗಂಟೆಗಳ ಕಾಲ ನೀರು ನಿಲ್ಲಲಿದೆ. ರಸ್ತೆ ಹಾಳಾಗಿದ್ದು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಬಸವರಾಜ್ ಮಾತನಾಡಿ, ಪಾಲಿಕೆ ಮುಂಭಾಗ ರಾತ್ರಿ 8 ಗಂಟೆ ನಂತರ ಸಿಟಿ ಬಸ್ ಸಿಗದೇ ಪ್ರಯಾಣಿಕರಿಗೆ ಅನಾನುಕೂಲವಾಗಿದೆ. ಆಟೋಗಳವರು ಹೆಚ್ಚಿನ ಹಣ ಕೇಳುತ್ತಾರೆ. ಹಾಗಾಗಿ 10 ಗಂಟೆಯವರೆಗೆ ಸಿಟಿ ಬಸ್ ವ್ಯವಸ್ಥೆ ಕಲ್ಪಿಸಲು ಮತ್ತು ಧೂಳುಮುಕ್ತ ನಗರವನ್ನಾಗಿ ಮಾಡಲು ಮನವಿ ಮಾಡಿದರು.

ಆಯುಕ್ತರಾದ ರೇಣುಕಾ ಅವರು ಮಾತನಾಡಿ, ಎಸ್ಪಿ, ಡಿಸಿ ಸಭೆಯಲ್ಲಿ ಆಟೋ ಚಾಲಕರಿಗೆ ಮೀಟರ್ ಅಳವಡಿಸಲು ಗಡುವು ನೀಡಲಾಗಿದೆ. ಅಳವಡಿಸದಿದ್ದಲ್ಲಿ ದಂಡ ವಿಧಿಸುವ ಎಚ್ಚರಿಕೆ ನೀಡಲಾಗಿದೆ. ನಗರ ಸ್ವಚ್ಛತೆಗೆ ಆದ್ಯತೆ ನೀಡುವ ಮೂಲಕ ಧೂಳುಮುಕ್ತ ನಗರ ಮಾಡಲಾಗುವುದು ಎಂದರು.

ಮೇಯರ್ ಚಮನ್‌ಸಾಬ್ ಅವರು ಸಾರಿಗೆ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ, ರಾತ್ರಿ 8 ರ ನಂತರ ಒಂದೆರಡು ಗಂಟೆಗಳ ವರೆಗೆ ಸಿಟಿ ಬಸ್ ವ್ಯವಸ್ಥೆ ಕಲ್ಪಿಸಲು ಹಾಗೂ ಹೆಚ್ಚಿನ ಬಸ್‌ಗಳನ್ನು ಬಿಡಲು ಮನವಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಆಶಯದಂತೆ ದಾವಣಗೆರೆಯನ್ನು ಧೂಳುಮುಕ್ತ ನಗರ ಮಾಡುವ ಸಲುವಾಗಿ 9 ಕೋಟಿ ರೂ. ವೆಚ್ಚದಲ್ಲಿ ಸ್ವಚ್ಛಗೊಳಿಸುವ ವಾಹನಗಳನ್ನು ತಂದು ಕೆಲಸ ಮಾಡಿಸಲಾಗುತ್ತಿದೆ. ಇನ್ನೂ ಕೆಲಸ ಪ್ರಗತಿಯಲ್ಲಿದೆ ಎಂದರು.

ನಾಮನಿರ್ದೇಶಿತ ಸದಸ್ಯ ಸಾಗರ್ ಮಾತನಾಡಿ, ನಗರದ ರಸ್ತೆಗಳಲ್ಲಿ ಮತ್ತು ಪಾಲಿಕೆ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿ ಶುಲ್ಕ ವಿಧಿಸಬೇಕು. ಬಾತಿ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಮಾಡಿ, ಬೋಟಿಂಗ್ ವ್ಯವಸ್ಥೆ ಮಾಡಬೇಕು. ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಸಂಘ-ಸಂಸ್ಥೆಗಳಿಗೆ ನೀಡಿದರೆ ಅಭಿವೃದ್ಧಿ ಜೊತೆಗೆ ಕಾರ್ಮಿಕರ ಕೊರತೆ ನೀಗಲಿದೆ ಮತ್ತು ಪಾಲಿಕೆಗೆ ಆದಾಯ ಕೂಡ ಬರಲಿದೆ ಎಂದು ಹೇಳಿದರು.

ಚರ್ಚ್ ರಸ್ತೆಯಲ್ಲಿನ ಪಾಲಿಕೆ ಕ್ವಾರ್ಟಸ್‌ನ್ನು ನೆಲಸಮಗೊಳಿಸಿ ಅಪಾರ್ಟ್‌ಮೆಂಟ್ ನಿರ್ಮಿಸಿದರೆ ಪಾಲಿಕೆ ನೌಕರರು ಬಾಡಿಗೆಗೆ ವಾಸಿಸಲಿದ್ದಾರೆ ಎಂದರು.

ನಗರದ ಉದ್ಯಾನವನಗಳನ್ನು ನಿರ್ವಹಣೆ ಮಾಡುವ ಸಂಘ-ಸಂಸ್ಥೆಗಳು ಇದ್ದರೆ ಪಾಲಿಕೆಗೆ ಭೇಟಿ ನೀಡಬಹುದು. ಸ್ವಚ್ಛತೆ ಮತ್ತು ನಿರ್ವಹಣೆಗೆ ಅವಕಾಶ ಮಾಡಿಕೊಡಲಾಗುವುದು ಎಂದು ಮಾಹಿತಿ ನೀಡಿದರು.

ಮತ್ತೊಬ್ಬ ನಾಮನಿರ್ದೇಶಿತ ಸದಸ್ಯ ಸುರಭಿ ಶಿವಮೂರ್ತಿ ಮಾತನಾಡಿ, ದಾವಣಗೆರೆಯಲ್ಲಿ ಪ್ರವಾಸಿ ತಾಣಗಳ ಕೊರತೆ ಇದ್ದು, ನಗರದ ಹೊರ ವಲಯದ ಗ್ಲಾಸ್ ಹೌಸ್ ಸಾರ್ವಜನಿಕವಾಗಿ ಸದ್ಬಳಕೆ ಆಗುತ್ತಿಲ್ಲ. ನಗರದಲ್ಲಿ ಮನರಂಜನಾ ಕೇಂದ್ರವನ್ನು ನಿರ್ಮಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಗಣೇಶ್, ಸುಧಾ ಇಟ್ಟಿಗುಡಿ, ಆಶಾ ಉಮೇಶ್, ಉರ್ಬಾನು ಪಂಡಿತ್, ಸದಸ್ಯ ಗಡಿಗುಡಾಳ್ ಮಂಜುನಾಥ್, ಲೆಕ್ಕಾಧಿಕಾರಿ ಪ್ರಿಯಾಂಕ ಸೇರಿದಂತೆ ಅನೇಕರಿದ್ದು ಸಲಹೆ-ಸೂಚನೆಗಳನ್ನು ನೀಡಿದರು.

# ನಾಳೆ ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ಸಹಸ್ರ ದೀಪೋತ್ಸವ



ದಾವಣಗೆರೆ, ಡಿ. 7- ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದ ಆವರಣದಲ್ಲಿರುವ ಶ್ರೀ ವಿಶ್ವಬಂಧು ಮರುಳಸಿದ್ಧೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 9 ರ ಸೋಮವಾರ ಸಂಜೆ 6ಕ್ಕೆ 17 ನೇ ವರ್ಷದ ಕಾರ್ತಿಕೋತ್ಸವದ ಪ್ರಯುಕ್ತ ಸಹಸ್ರ ದೀಪೋತ್ಸವ ಹಾಗೂ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಅಂದು ಸಂಜೆ 6 ಕ್ಕೆ ತರಳಬಾಳು ಬಡಾವಣೆಯ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿರುವ ಶ್ರೀ ಮರುಳಸಿದ್ದೇಶ್ವರ ದೀಪೋತ್ಸವ ಕಾರ್ಯಕ್ರಮಕ್ಕೆ ಜಗದ್ಗುರುಗಳು ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ನ್ಯಾಯಾಧೀಶ ಮಹಾವೀರ ಮ. ಕರೆಣ್ಣವರ, ಜಿಲ್ಲಾಧಿಕಾರಿ ಡಾ. ಜಿ.ಎಂ.ಗಂಗಾಧರ ಸ್ವಾಮಿ, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವ ರಾಜಪ್ಪ ಉಪಸ್ಥಿತರಿರುವರು.

ಶ್ರೀ ವಿಶ್ವಬಂಧು ಮರುಳಸಿದ್ದೇಶ್ವರ ದೇವಸ್ಥಾನ ಕಾರ್ತಿಕ ಸಮಿತಿ ಅಧ್ಯಕ್ಷ ಹೆಚ್. ಜಯಣ್ಣ ರಾಮಗೊಂಡನಹಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ನಂತರ ಕಲ್ಯಾಣ ಮಂಟಪದಲ್ಲಿ ಸಿರಿಗೆರೆ ತರಳಬಾಳು ಕಲಾ ಸಂಘದಿಂದ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಿದ್ದವೀರಪ್ಪ ಬಡಾವಣೆಯ ತುಳಸಿ ಮಹಿಳಾ ಸಂಘದಿಂದ ಗೋವಿನಹಾಡು (ನೃತ್ಯರೂಪಕ), ಭರತನಾಟ್ಯ, ಮಲ್ಲಕಂಬ, ಮಲ್ಲಿಹಗ್ಗ, ಜಡೆ ಕೋಲಾಟ, ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ.

# ರೈತ ಸಂಘದಿಂದ ನಾಳೆ ಬೆಳಗಾವಿ ಸುವರ್ಣ ಸೌಧಕ್ಕೆ ಮುತ್ತಿಗೆ

ದಾವಣಗೆರೆ, ಡಿ.7- ರೈತರಿಗೆ ಮಾರಕವಾದ ಮೂರು ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ಕೂಡಲೇ ಕೈ ಬಿಡಬೇಕೆಂಬುದು ಸೇರಿ, ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನಾಡಿದ್ದು ದಿನಾಂಕ 9ರ ಸೋಮವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ವಾಸುದೇವ ಭೇಟಿ ಬಣ) ಬೆಳಗಾವಿ ಸುವರ್ಣ ಸೌಧಕ್ಕೆ ಚಲೋ ಹಾಗೂ ಮುತ್ತಿಗೆ ಹಾಕಲಿದೆ.

ರೈತರ ಸಾಲ ಸಂಪೂರ್ಣ ಮನ್ನಾ ಮಾಡುವ ಜತೆಗೆ ಜಿಲ್ಲೆಯಲ್ಲಿ ನೀರಾವರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಲಿದ್ದೇವೆ ಎಂದು ಸಂಘದ ಜಿಲ್ಲಾಧ್ಯಕ್ಷ ಗುಮ್ಮನೂರು ಬಸವರಾಜ್ ತಿಳಿಸಿದರು.

ರಾಜ್ಯದಲ್ಲಿ ರೈತರು ಬೆಳೆದಂತಹ ಬೆಳೆಗಳಿಗೆ ಕೂಡಲೇ ಖರೀದಿ ಕೇಂದ್ರವನ್ನು ತೆರೆಯಬೇಕೆಂದ ಅವರು, ಜಗಳೂರಿನಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭಿಸಬೇಕೆಂದು ಒತ್ತಾಯಿಸಿದರು. ರಾಜ್ಯದ ಎಲ್ಲಾ ಜಿಲ್ಲೆಯಲ್ಲೂ ಬಗರ್ ಹುಕ್ಕುಂ ಸಾಗುವಳಿದಾರರನ್ನು ಕೂಡಲೇ ಮೀಟಿಂಗ್ ಕರೆಯಬೇಕು ಮತ್ತು ಅವರಿಗೆ ಹಕ್ಕು ಪತ್ರ ಕೊಡಬೇಕು. ರೈತರ ಪಂಪ್‌ಸೆಟ್‌ಗಳಿಗೆ ಆಧಾರ್ ಜೋಡಣೆ ನೀತಿ ಕೈ ಬಿಡಬೇಕು ಎಂದು ಹೇಳಿದರು.

ಜಗಳೂರು ತಾಲ್ಲೂಕಿನಲ್ಲಿ ವಿಂಡ್ ಫ್ಯಾನ್ ಅಳವಡಿಸುವ ಹಾವಳಿ ಹೆಚ್ಚಾಗಿದ್ದು, ಕೂಡಲೇ ಈ ಬಗ್ಗೆ ಕ್ರಮ ಜರುಗಿಸುವಂತೆ ಬೇಡಿಕೆ ಇಡುವ ಜತೆಗೆ ಈ ತಾಲ್ಲೂಕಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಅನುಷ್ಠಾನಗೊಳಿಸಬೇಕೆಂದರು.

ತಾಲ್ಲೂಕಿನಲ್ಲಿ ಹಲವಾರು ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಗೊಂಡಿದ್ದು, ಹೊಸದಾಗಿ ಶಾಲಾ ಕೊಠಡಿಗಳನ್ನು ನಿರ್ಮಿಸಬೇಕು, ಆ್ಯಂಬ್ಯುಲೆನ್ಸ್ ವ್ಯವಸ್ಥೆ ಕಲ್ಪಿಸಬೇಕು ಹಾಗೂ ಜಗಳೂರಿನಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತೆರೆಯುವಂತೆ ಆಗ್ರಹಿಸಲಾಗುವುದು ಎಂದರು.

ರೈತರ ಜಮೀನುಗಳ ಪಹಣಿಗಳಲ್ಲಿ ವಕ್ಫ್ ಬೋರ್ಡ್ ಎಂದು ನಮೂದಾಗಿರುವ ಬಗ್ಗೆ ಕೂಡಲೇ ಕ್ರಮ ಜರುಗಿಸಬೇಕು ಹಾಗೂ ರೈತರು ಬೆಳೆದಂತಹ ಬೆಳೆಗಳಿಗೆ ಬೆಳೆ ವಿಮೆ, ಬೆಳೆ ಪರಿಹಾರ, ಅತಿವೃಷ್ಟಿಯಂತಹ ಸಮಸ್ಯೆಗಳಿಗೆ ಕೂಡಲೇ ರೈತರ ಖಾತೆಗೆ ಹಣ ಜಮಾ ಮಾಡಬೇಕು ಎಂದು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ರಾಜ್ಯಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಬೆಳಗಾವಿ ಸುವರ್ಣ ಸೌಧ ಚಲೋಗೆ ಆಗಮಿಸುತ್ತಿದ್ದು, ಜಿಲ್ಲೆಯಿಂದ 300ಕ್ಕೂ ಅಧಿಕ ರೈತರು ಮುತ್ತಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ವೇಳೆ ಕೋಲ್ಕುಂಟೆ ಉಚ್ಚಂಗಪ್ಪ, ಚಿಕ್ಕಬೂದಿಹಾಳ್ ಭಗತ್ ಸಿಂಹ, ಕುಮಾರ್ ಭರಮಸಮುದ್ರ, ಚಿಕ್ಕತೊಗಲೇರಿ ಮಲ್ಲಿಕಾರ್ಜುನ್, ಕಿರಣ್ ಕುಮಾರ್ ನಿಂಗನಹಳ್ಳಿ ಸುದ್ದಿಗೋಷ್ಠಿಯಲ್ಲಿದ್ದರು.

# ನೀರಾವರಿ ಇಲಾಖೆಯ ಕಛೇರಿಗೆ ಭೇಟಿ ನೀಡಿದ ಶಾಸಕ ಬಿ.ಪಿ.ಹರೀಶ್



ಮಲೇಬೆನ್ನೂರು, ಡಿ.7- ಇಲ್ಲಿನ ನೀರಾವರಿ ಇಲಾಖೆಯ ಕಛೇರಿಗೆ ಶನಿವಾರ ಭೇಟಿ ನೀಡಿದ ಶಾಸಕ ಬಿ.ಪಿ.ಹರೀಶ್ ಅವರು, ಬಹುದಿನಗಳಿಂದ ಬಾಕಿ ಇರುವ ಸೌಡಿಗಳ ವೇತನದ ಬಗ್ಗೆ ಎಇಇ ಅವರ ಜೊತೆ ಚರ್ಚಿಸಿ, ಆದಷ್ಟು ಬೇಗ ವೇತನ ನೀಡುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಗಳಿ ಬಿಳಸನೂರು ಚಂದ್ರಣ್ಣ, ಜಿ.ಪಿ.ಮಂಜುನಾಥ ಹಾಗೂ ಕಛೇರಿ ಸಿಬ್ಬಂದಿ ಉಪಸ್ಥಿತರಿದ್ದರು.

# ಕನ್ಸಲ್ಟಿಂಗ್ ಇಂಜಿನಿಯರ್‌ಗಳ ಸಭೆ

ದಾವಣಗೆರೆ, ಡಿ.6- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಿಗೆ ಅರ್ಜಿಗಳನ್ನು ಅಪ್‌ಲೋಡ್ ಮಾಡುವಲ್ಲಿ ಇರುವ ತೊಡಕುಗಳನ್ನು ಸಮಸ್ಯೆಗಳ ಬಗ್ಗೆ ಚರ್ಚಿಸಲು ಡಿಸೆಂಬರ್ 9 ರಂದು ಸಂಜೆ 4 ಗಂಟೆಗೆ ಕನ್ಸಲ್ಟೆಂಟ್ ಇಂಜಿನಿಯರ್‌ಗಳ ಸಭೆಯನ್ನು ಪಾಲಿಕೆ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸಂಗೀತ ಮಹೋತ್ಸವ

ದಾವಣಗೆರೆ, ಡಿ.7- ಆರೋಹಿ ಸಂಗೀತ ಕಲಾ ಸಂಸ್ಥೆಯಿಂದ ಪದ್ಮಭೂಷಣ ಡಾ.ಪಂ. ಪುಟ್ಟರಾಜ ಕವಿಗಳ ಗುರುಸ್ಮರಣೆ ನಿಮಿತ್ತ ನಾಳೆ ದಿನಾಂಕ 8ರ ಭಾನುವಾರ ಬೆಳಗ್ಗೆ 9.30ಕ್ಕೆ ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ 'ಉದಯ ರಾಗದಿಂದ ಸಂಧ್ಯಾರಾಗ' ಸಂಗೀತ ಮಹೋತ್ಸವ ಹಾಗೂ ವಾರ್ಷಿಕ ಸಂಭ್ರಮ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಆನಂದ್ ಆರ್. ಪಾಟೀಲ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿನ ಪ್ರತಿಭೆಗಳನ್ನು ಗುರುತಿಸುವ ಉದ್ದೇಶದಿಂದ ಸಂಸ್ಥೆಯು ಕಳೆದ ಆರು ವರ್ಷದಿಂದ ಈ ಕಾರ್ಯಕ್ರಮ ನಡೆಸಿಕೊಂಡು ಬಂದಿದೆ ಎಂದು ವಿವರಿಸಿದರು.

ಬೆಳಗ್ಗೆ 11ಕ್ಕೆ ಸಂಗೀತ ಮಹೋತ್ಸವ ನಡೆಯಲಿದ್ದು, ಆವರಗೊಳ್ಳ ಪುರವರ್ಗ ಮಠದ ಓಂಕಾರ ಶಿವಾಚಾರ್ಯ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದು, ಡಿವೈಎಸ್ಪಿ ರುದ್ರೇಶ್ ಉಜ್ಜಿನಿ ಕೊಪ್ಪ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದರು.

ಸಾಹಿತಿ ಬಿ.ಎನ್. ಮಲ್ಲೇಶ್, ಬಾಪೂಜಿ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಸದಸ್ಯ ಸಂಪನ್ನ ವಿ. ಮುತಾಲಿಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಸಾಹಿತಿ ಬಾ.ಮ. ಬಸವರಾಜಯ್ಯ, ಪುಣ್ಯಾಶ್ರಮದ ಕಾರ್ಯದರ್ಶಿ ಜಾಲಿಮರದ ಡಾ. ಕರಿಬಸಪ್ಪ, ಸಹಾಯಕ ಪ್ರಾಧ್ಯಾಪಕ ಡಿ.ಆರ್. ನಟರಾಜ ಹಿರೇಮಠ ಭಾಗವಹಿಸಲಿದ್ದಾರೆ.

ಇದೇ ವೇಳೆ ತೋಟಪ್ಪ ಉತ್ತಂಗಿ, ರಾಮಲಿಂಗಾ ಜಲ್ಲಾಪುರ, ಶಿವಬಸವಯ್ಯ ಸ್ವಾಮಿ, ಚನ್ನವೀರಯ್ಯಸ್ವಾಮಿ, ಅಮರಯ್ಯಸ್ವಾಮಿ ಹಿರೇಮಠ್ ಹಾಗೂ ಅಕ್ಕಮ್ಮ ಹಿರೇಮಠ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಮತ್ತು ಇದೇ ವೇಳೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದರು.

ಸಂಜೆ 6ಕ್ಕೆ ವಿಶೇಷ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಸಂಗೀತ ಪ್ರಾಧ್ಯಾಪಕ ವೆಂಕಟೇಶ್ ಅಲ್ಕೋಡ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಕಾರ್ಯಕ್ರಮ ನಡೆಸಿಕೊಳ್ಳಲಿದ್ದಾರೆ ಎಂದರು.

ವೀರೇಶ್ವರ ಪುಣ್ಯಾಶ್ರಮದ ಅಂಧ ವಿದ್ಯಾರ್ಥಿಗಳಿಂದ ಸುಗಮ ಸಂಗೀತ ಹಾಗೂ ಸಮೂಹ ಗಾಯನ ನೆರವೇರಲಿದೆ ಎಂದು ತಿಳಿಸಿದರು.

ಈ ವೇಳೆ ತಬಲಾ ವಾದಕ ಸುರೇಶ್ ಕೊಪ್ಪಳ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ರವಿಕುಮಾರ್ ಆಳಂದ ಸುದ್ದಿಗೋಷ್ಠಿಯಲ್ಲಿದ್ದರು.

# ನಾಳೆ ಗುರು ಕರಿಬಸವೇಶ್ವರ ಕಾರ್ತಿಕ



ದಾವಣಗೆರೆ, ಡಿ.7- ನಗರದ ಲೇಬರ್ ಕಾಲೋನಿ 6ನೇ ಕ್ರಾಸ್‌ನಲ್ಲಿನ ಶ್ರೀ ಗುರು ಕರಿಬಸವೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 9 ರಂದು ಸೋಮವಾರ ಸಂಜೆ 6.30ಕ್ಕೆ ಸ್ವಾಮಿಯ ಕಾರ್ತಿಕ ದೀಪೋತ್ಸವ ಏರ್ಪಡಿಸಲಾಗಿರುತ್ತದೆ.

# ನಗರದಲ್ಲಿ ಇಂದು ವಿದ್ಯಾಧೀಶ ಆಚಾರ್ಯ ಗುತ್ತಲ ಅವರಿಂದ ಮಹಾಭಾರತ ಪ್ರವಚನ



ವಿಶ್ವ ಮಧ್ವ ಮಹಾಪರಿಷತ್ತಿನ ದಾವಣಗೆರೆ ಕೇಂದ್ರದ ರಜತ ಮಹೋತ್ಸವ ಅಂಗವಾಗಿ ಪಂಡಿತ ವಿದ್ಯಾಧೀಶ ಆಚಾರ್ಯ ಗುತ್ತಲ ಅವರಿಂದ ಮಹಾಭಾರತ ಪ್ರವಚನ ಕಾರ್ಯಕ್ರಮವು ಇಂದಿನಿಂದ ಮೂರು ದಿನ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಯಲಿದೆ. ಇಂದು ಬೆಳಗ್ಗೆ 9 ರಿಂದ ಮನ್ಯುಸೂಕ್ತ ಮತ್ತು ವೇದವ್ಯಾಸ ಮಂತ್ರದ ಹೋಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 11 ರಿಂದ 12.30 ರ ವರೆಗೆ ಪ್ರವಚನದ ಮಂಗಳ ಇರುತ್ತದೆ.


**WANTED**

Public Relations Officer
Hostel Supervisor

*for Reputed Institution in Davangere.*

**73494 88957, 70220 04109**


# ಜಿಲ್ಲೆಯ ಕೆರೆ ಅಭಿವೃದ್ಧಿ ಕುರಿತು ಸಭೆ

ದಾವಣಗೆರೆ, ಡಿ.7- ಜಿಲ್ಲೆಯ ಕೆರೆ ಅಭಿವೃದ್ಧಿ ಕುರಿತು ಶನಿವಾರ ಪ್ರವಾಸಿ ಮಂದಿರದಲ್ಲಿ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ನೆಲ, ಜಲ,ಪರಿಸರ ಆಂದೋಲನ ಹಾಗೂ ಕೆರೆಗಳ ಆಂದೋಲನದ ವಿಚಾರವಾಗಿ ಸದಾ ಬೆಂಬಲ ನೀಡಿ ಸಹಕರಿಸುವುದಾಗಿ ಹೇಳಿದರು.

ಜಿಲ್ಲೆಯಲ್ಲಿ ಒಟ್ಟು 538 ಕೆರೆಗಳಿದ್ದು, ಅದರಲ್ಲಿ ಮಹಾನಗರ ಪಾಲಿಕೆ ಸೇರಿದ ಕೆರೆಗಳು ಬೃಹತ್ ನೀರಾವರಿ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಜಿಲ್ಲಾ ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಯ ಕೆರೆಗಳು ಸೇರಿವೆ.

ಕೆರೆಗಳ ಹೂಳು ತೆಗೆಯುವುದು ಹಾಗೂ ಕೆರೆಗಳ ಏರಿ ಭದ್ರಗೊಳಿಸುವುದು ಹಾಗೂ ಒತ್ತುವರಿಯಾಗಿರುವ ಮಳೆಯ ನೀರು, ಕೆರೆಗೆ ಬರುವ ಜಾಗವನ್ನು ತೆರವುಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ರಾಜ್ಯ ಸಂಚಾಲಕ ಬಲ್ಲೂರು ರವಿಕುಮಾರ್ ಮಾತನಾಡಿ, ಹರಿಹರ ತಾಲೂಕಿನ ಮಲೇಬೆನ್ನೂರಿಗೆ ಸೇರಿದ 9200ಎಕರೆ ಅರಣ್ಯ ಪ್ರದೇಶದಲ್ಲಿ ಸುಮಾರು 10ಎಕರೆ ಜಾಗದಲ್ಲಿ ಮುದ್ದಪ್ಪನ ಕೆರೆ ಇದ್ದು ಕೆರೆಯ ಏರಿ ಒಡೆದಿದೆ.

ಏರಿಯನ್ನು ಈಗಾಗಲೇ ಜಿಲ್ಲಾ ಪಂಚಾಯಿತಿಯಿಂದ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಸಂಘದ ಲಕ್ಷ್ಮಣ್ ಮಾತನಾಡಿ, ದಾವಣಗೆರೆ ಉತ್ತರ ವಿಭಾಗದ ಯರಗುಂಟೆ ಗ್ರಾಮದ ರಿ.ಸ.ನಂ.ನಲ್ಲಿ ಒಂದು ಎಕರೆ 20ಗುಂಟೆ ಜಾಗದಲ್ಲಿ ಹೊಸಕೆರೆ ನಿರ್ಮಾಣ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಐಗೂರು ಶಿವಮೂರ್ತಪ್ಪ ಅವರು ಐಗೂರು ಮತ್ತು ಹೊನ್ನೂರು ಕೆರೆಗಳನ್ನು ಅಭಿವೃದ್ಧಿ ಪಡಿಸಲು ಸಲಹೆ ನೀಡಿದರು. ಪ್ರಮುಖರಾದ ಕತ್ತಲಗೆರೆ ತಿಪ್ಪಣ್ಣ, ಬಸವಪಟ್ಟಣದ ರಾಜಣ್ಣ, ವಸಂತ ಇನ್ನಿತರರು ಸಭೆಯಲ್ಲಿದ್ದರು.





# ಜಿಲ್ಲೆಯ 22 ಕೇಂದ್ರಗಳಲ್ಲಿ ಪಿಡಿಓ ಪರೀಕ್ಷೆ ಯಶಸ್ವಿ

ದಾವಣಗೆರೆ, ಡಿ.7- ಕರ್ನಾಟಕ ಲೋಕಸೇವಾ ಆಯೋಗದಿಂದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಗ್ರೂಪ್ ಸಿ ಹುದ್ದೆಗಳಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ 150 ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ಶನಿವಾರ ನಗರದಲ್ಲಿ ನಡೆಯಿತು.

ಜಿಲ್ಲೆಯ 22 ಪರೀಕ್ಷಾ ಕೇಂದ್ರಗಳಲ್ಲಿ 9198 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. 2 ರಿಂದ 4 ಗಂಟೆಯವರೆಗೆ ಕನ್ನಡ ಭಾಷಾ ಪರೀಕ್ಷೆ ನಡೆಯಿತು. ನಾಳೆ ಭಾನುವಾರವೂ 27 ಪರೀಕ್ಷಾ ಕೇಂದ್ರಗಳಲ್ಲಿ 11749 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಬೆಳಿಗ್ಗೆ 10 ರಿಂದ 11.30 ರವರೆಗೆ ಪತ್ರಿಕೆ-1 ಸಾಮಾನ್ಯ ಜ್ಞಾನ, ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಪತ್ರಿಕೆ-2, ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲೀಷ್, ಕಂಪ್ಯೂಟರ್ ಜ್ಞಾನ ವಿಷಯದ ಕುರಿತು ಪರೀಕ್ಷೆ ನಡೆಯಲಿದೆ.

## ದೆಹಲಿಯಲ್ಲಿ ರೈತ ವಿರೋಧ ನೀತಿಗೆ ಖಂಡನೆ

# ರೈತ ಸಂಘದಿಂದ ನಾಳೆ ಸಂಸದರ ಮನೆ ಮುಂದೆ ಧರಣಿ

ದಾವಣಗೆರೆ, ಡಿ.7- ದೆಹಲಿ ಗಡಿಯಲ್ಲಿ ನಡೆದಿರುವ ರೈತರ ಚಳವಳಿ ಹತ್ತಿಕ್ಕುವ ಕೇಂದ್ರ ಸರ್ಕಾರದ ರೈತ ವಿರೋಧ ನೀತಿ ಖಂಡಿಸಿ ನಾಡಿದ್ದು ದಿನಾಂಕ 9ರಂದು ಮಧ್ಯಾಹ್ನ 12ಗಂಟೆಗೆ ಸಂಸದರ ಮನೆ ಎದುರು ಧರಣಿ ನಡೆಸಲು ರೈತ ಸಂಘ ಹಾಗೂ ಹಸಿರು ಸೇನೆ ತೀರ್ಮಾನಿಸಿದೆ.

ನಗರದ ಎಪಿಎಂಸಿ ಸಭಾಭವನದಲ್ಲಿ ಶನಿವಾರ ನಡೆದ ರೈತರ ಸಭೆಯಲ್ಲಿ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಲಾಯಿತು.

ದೆಹಲಿಯ ಗಡಿಭಾಗದಲ್ಲಿ ರೈತರನ್ನು ಅಶ್ರುವಾಯು ಸೇರಿದಂತೆ ಇನ್ನಿತರ ಅಸ್ತ್ರಗಳಿಂದ ರೈತರನ್ನು ಬೆದರಿಸಲಾಗುತ್ತಿದೆ. ಇದನ್ನು ವಿರೋಧಿಸಿ ದೇಶಾದ್ಯಂತ ಸಂಸದರ ಮನೆಯದರು ಪ್ರತಿಭಟಿಸಿ ಮನವಿ ಸಲ್ಲಿಸಲು ತೀರ್ಮಾನಿಸಲಾಗಿದ್ದು ಅದರಂತೆ ಜಿಲ್ಲೆಯಲ್ಲಿಯೂ ಪ್ರತಿಭಟನೆ ಮಾಡಲಾಗುವುದು ಎಂದರು.

ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಬಲ್ಲೂರ್ ರವಿಕುಮಾರ್, ಜಿಲ್ಲಾಧ್ಯಕ್ಷ ರಾಮಪುರ ಬಸವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಬ್ಬಾಳ ರಾಜ ಯೋಗಿ, ಜಿಲ್ಲಾ ಸಂಚಾಲಕ ಮಿಯ್ಯಾಪುರ ತಿರುಮಲೇಶ್, ತಾಲ್ಲೂಕು ಅಧ್ಯಕ್ಷರಾದ ನಾಗರಕಟ್ಟೆ ಜಯ ನಾಯಕ್, ಬಸವರಾಜಪ್ಪ ಮಲೇಬೆನ್ನೂರು ಇನ್ನಿತರರು ಸಭೆಯಲ್ಲಿದ್ದರು.


**ಶುಭ ಹಾರೈಕೆಗಳು**



ಇತ್ತೀಚೆಗೆ ಬಿಡುಗಡೆಯಾದ ಪುಷ್ಪ-2 ಚಲನ ಚಿತ್ರವನ್ನು ವೀಕ್ಷಿಸಲು ನಮ್ಮೆಲ್ಲರ ಪ್ರೀತಿಯ, ಆತ್ಮೀಯ ಗೆಳೆಯ



**ಅನಿಲ್** ಇವರು

ದಾವಣಗೆರೆಯಿಂದ ಹೈದ್ರಾಬಾದ್‌ಗೆ ಪ್ರಯಾಣಿಸಲಿದ್ದಾರೆ.

ಇವರಿಗೆ ಶುಭವಾಗಲಿ ಹಾಗೂ ಇವರ ಪ್ರಯಾಣ ಸುಖ ಕರವಾಗಿರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಇಂತಿ ಕುಚುಕು ಬಳಗ :

+ ಕಾರ್ತಿಕ್ ಪಾಟೀಲ್ + ದರ್ಶನ್ ಶಾಮನೂರು + ಪುನೀತ್ ಕಲ್ಕೇರಿ + ಅರ್ಜುನ್ ಜಕ್ಕ + ಅಮೋಘ + ಸುಚಿತ್ರ + ಜ್ಯೋತಿ + ಪಲ್ಲವಿ + ಚೇತು



**Principal and Clerk Position Open**

*Place: Davangere*

We are inviting applications for the following positions for the next academic year at a reputed school offering education from Pre-Primary to Grade 10:

**1.Principal**
*Minimum 2 years of experience as a Principal.*

**2.Clerk**
*Minimum 2 years of experience.*

**Proficiency in Tally, MS Excel, and STS is required.**

**Interested applicants may send their resumes to what's app number +9178998 54601/ +918073801942**



ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್

**ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಿ.ಜಿ ಆಸ್ಪತ್ರೆ, ಆವರಣ, ದಾವಣಗೆರೆ ಪೋ. ನಂ:08192-223761

ಇ-ಮೇಲ್: npcdcsdavangere@gmail.com

SL NO: NHM/DSU/CPHC-UHC/79/24-25 DATE: 05/12/2024

**ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ**

ರಾಷ್ಟ್ರೀಯ ಕಾರ್ಯಕ್ರಮ-2024-25ನೇ ಸಾಲಿಗೆ ಸಿಪಿಹೆಚ್‌ಸಿ-ಯೂಹೆಚ್‌ಸಿ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳ 150 ಆಯುಷ್ಮಾನ್ ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000ರ ಪ್ರಕಾರ ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ-ಟೆಂಡರ್ ಕರೆಯಲಾಗಿದೆ.

**Tender Reference No: DHFWS/2023-24/ Drugs. Date:05/12/2024**

**(1)** DATE AND TIME OF ACCESSING TENDER DOCUMENT From : 05.12.2024 **(2)** LAST DATE AND TIME FOR UP LOADING OF FILLED TENDERS 18.12.2024 upto 5.00 P.M **(3)** Pre-Bid Meeting to be held on OFFICE OF THE District Health and Family Welfare Office DAVANAGERE DISTRICT -577005 SHALL BE INTIMATED **(4)** LAST DATE FOR QUERIES THROUGH ON-LINE 11.12.2024 up to 5.00 A.M **(5)** TIME AND DATE OF OPENING OF TENDER (Online) TECHNICAL BID (1ST COVER) : 19.12.2024 **(6)** DEMONSTRATION OF EQUIPMENTS SHALL BE INTIMATED **(7)** TIME AND DATE OF OPENING OF FINANCIAL BID SHALL BE INTIMATED **(8)** ADDRESS FOR COMMUNICATION OFFICE OF THE District Health and Family Welfare Office Davanagere-577005. 8971914726, 9449843256 **(9)** APPROXIMATE COST OF THE TENDER Rs. 18,00,000/- **(10)** EMD AMOUNT 45,000/- **(11)** TENDER DOCUMENT FEES As per E-Procurement

ವಾಸಾಇ/ದಾವಣಗೆರೆ/555/ಕೆಎಸ್‌ಎಂಸಿಎ/2024-25

ಸಹಿ/- ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಹಾಗ ಕಾರ್ಯಕ್ರಮಾಧಿಕಾರಿಗಳು, ದಾವಣಗೆರೆ.

# ವಕೀಲ ವೃತ್ತಿಯಿಂದ ಸದೃಢ ಸಮಾಜ ನಿರ್ಮಾಣ

## ವಕೀಲರ ದಿನಾಚರಣೆಯಲ್ಲಿ ವಿನಯ್ ಬಾಳಾಸಾಹೇಬ್ ಮಾಂಗಳೇಕರ್



ದಾವಣಗೆರೆ, ಡಿ.7- ವಕೀಲರಾಗುವುದು ಕೇವಲ ವಕೀಲಿಕೆ ಮಾಡಲಿಕ್ಕಷ್ಟೇ ಅಲ್ಲ, ಸಮಾಜ ಹಾಗೂ ದೇಶವನ್ನು ಕಟ್ಟುವುದಕ್ಕೆ ಎಂದು ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನ ಉಪಾಧ್ಯಕ್ಷ ವಿನಯ್ ಬಾಳಾಸಾಹೇಬ್ ಮಾಂಗಳೇಕರ್ ತಿಳಿಸಿದರು.

ಜಿಲ್ಲಾ ನ್ಯಾಯಾಲಯದ ಆವರಣದ ಲ್ಲಿರುವ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಶನಿವಾರ ಆಯೋಜಿಸಿದ್ದ ವಕೀಲರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಕೀಲರು ಸಾಮಾಜಿಕ ನ್ಯಾಯದ ಜತೆಗೆ ಜನ ಸಾಮಾನ್ಯರ ಹಕ್ಕುಗಳನ್ನು ರಕ್ಷಿಸಿಸಲು ಶ್ರಮಿಸುತ್ತಾರೆ. ಬದಲಾಗುತ್ತಿ ರುವ ಈ ಕಾಲ ಘಟ್ಟದಲ್ಲಿ ಸಾಂವಿಧಾನಿಕ ತತ್ವಗಳನ್ನು ರಕ್ಷಿಸುವುದು ನಮ್ಮ ಸವಾಲಿನ ಜೊತೆಗೆ ಹೊಣೆಯೂ ಆಗಿದೆ ಎಂದು ಹೇಳಿದರು.

ಕೃತಕ ಬುದ್ಧಿಮತ್ತೆ, ತಂತ್ರಜ್ಞಾನ ಹಾಗೂ ಡಿಜಿಟಲೀಕರಣದಿಂದ ಈ ವೃತ್ತಿಯು ಸಾಕಷ್ಟು ಬದಲಾವಣೆ ಕಂಡಿದೆ. ಇಂತಹ ಬದಲಾವಣೆಗಳಿಂದ ವಕೀಲ ವೃತ್ತಿಗೆ ದಕ್ಷತೆ ಬಂದಿದೆ. ಹಾಗಾಗಿ ನಿರಂತರ ಕಲಿಕೆ ಬಹಳ ಮುಖ್ಯ ಎಂದು ಹೇಳಿದರು.

ಹಿರಿಯ ವಕೀಲರು, ಕಿರಿಯ ವಕೀಲರಿಗೆ ಮಾರ್ಗದರ್ಶನ ನೀಡುತ್ತಾ ಬಂದಿದ್ದರಿಂದ ವಕೀಲ ಸಮುದಾಯ ಹೆಚ್ಚು ಬೆಳೆದಿದೆ. ಈ ನಿಟ್ಟಿನಲ್ಲಿ ಹಿರಿಯರು, ಕಿರಿಯ ವಕೀಲರಿಗೆ ತಮ್ಮ ಅನುಭವ, ಕೌಶಲ ಹಾಗೂ ಜ್ಞಾನವನ್ನು ಧಾರೆ ಎರೆಯುವುದು ನಿರಂತರ ಅಗತ್ಯವಾಗಿದೆ ಎಂದರು.

ಹಿರಿಯ ವಕೀಲರ ಮಾರ್ಗದರ್ಶನ ದಲ್ಲಿ ವೃತ್ತಿಯ ಘನತೆ ಎತ್ತಿ ಹಿಡಿಯಲು ಹಾಗೂ ಸಾಮಾಜಿಕ ನ್ಯಾಯ ಒದಗಿಸಲು ಕಿರಿಯ ವಕೀಲರು ಶ್ರಮಿಸಬೇಕಿದೆ ಎಂದು ಹೇಳಿದರು.

ನ್ಯಾಯ ಎಲ್ಲರಿಗೂ ದೊರೆಯಬೇಕು. ವಿಶೇಷವಾಗಿ ದಮನಿತರು ಹಾಗೂ ಕೆಳವರ್ಗದ ಜನರಿಗೆ ನ್ಯಾಯ ಒದಗಿಸಲು ಶ್ರಮಿಸಬೇಕು ಎಂದ ಅವರು, ವಕೀಲರ ಪರಿಷತ್ ದಾವಣಗೆರೆಯಲ್ಲಿ ಕಾರ್ಯಾಗಾರ ನಡೆಸಲು ಸಿದ್ಧವಿದೆ ಎಂದರು.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ ಮಾತ ನಾಡಿ, ನ್ಯಾಯಾಲಯ ನೊಂದವರ ಕಣ್ಣಿರು ಒರೆಸುವ ಕಾರ್ಯ ಮಾಡಬೇಕು. ಈ ನಿಟ್ಟಿನಲ್ಲಿ ವಕೀಲರು ವೃತ್ತಿಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಾಗ ಕಕ್ಷಿದಾರನಿಗೆ ನ್ಯಾಯ ಕೊಡಿಸಲು ಸಾಧ್ಯವಾಗಲಿದೆ ಎಂದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ ಮಾತನಾಡಿ, ಯುವ ವಕೀಲರು ಆರಂಭದಲ್ಲೇ ಹಣಕ್ಕಾಗಿ ಕೆಲಸ ಮಾಡಬೇಡಿ. ಮೊದಲು ವೃತ್ತಿಯಲ್ಲಿ ಪಳಗಿ, ಮುಂದೆ ದುಡ್ಡು ತಾನಾಗಿಯೇ ಬರುತ್ತದೆ ಎಂದು ಕಿರಿಯ ವಕೀಲರಿಗೆ ಕಿವಿಮಾತು ಹೇಳಿದರು. ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್ ಅರುಣ್ ಕುಮಾರ್ ಮಾತನಾಡಿ, ಜಿಲ್ಲಾ ಸಂಘಕ್ಕೆ ರಾಜ್ಯ ಪರಿಷತ್ ನಿಂದ ಬರುವ ಕಾರ್ಯಾಗಾರದ ಅನುದಾನ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು. ಸಂವಿಧಾನ ರಚನಾ ಕರಡು ಸಮಿತಿಯಲ್ಲಿ ನಮ್ಮ ಸಂಘದ ಹೆಚ್. ಸಿದ್ದವೀರಬಸಪ್ಪ ಇದ್ದರು ಎಂಬುದು ಹೆಮ್ಮೆಯ ವಿಷಯ ಎಂದರು.

ಈ ವೇಳೆ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್ ಕುಮಾರ್, ಶ್ರೀರಾಮ ನಾರಾಯಣ ಹೆಗಡೆ, ಶಿವಪ್ಪ ಗಂಗಪ್ಪ ಸಲಗರೆ, ಟಿ.ಎಂ. ನಿವೇದಿತ, ಮಹಾವೀರ ಮ. ಕರೆಣ್ಣನವರ್, ಹಿರಿಯ-ಕಿರಿಯ ವಕೀಲರು ಇದ್ದರು.

### ಮರಣೋತ್ತರ ನಿಧಿ 25 ಲಕ್ಷಕ್ಕೆ ಹೆಚ್ಚಿಸಿ..!

ವಕೀಲರ ಸಂಘದ ಸದಸ್ಯ ಮರಣ ಹೊಂದಿದರೇ ಆತನ ಕುಟುಂಬಕ್ಕೆ ರಾಜ್ಯ ವಕೀಲರ ಪರಿಷತ್ ವತಿಯಿಂದ 25 ಲಕ್ಷ ರೂ.ಗಳನ್ನು ನೀಡಬೇಕೆಂದು ಹಿರಿಯ ವಕೀಲ ಲೋಕಿಕೆರೆ ಸಿದ್ದಪ್ಪ ಒತ್ತಾಯಿಸಿದರು.

### 6ರಿಂದ 10 ಲಕ್ಷ ರೂ.ಗೆ ಹೆಚ್ಚಿಸುವ ಭರವಸೆ...!

ಈಗಾಗಲೇ ನಾವು ಪ್ರಸ್ತಾವನೆ ಸಲ್ಲಿಸಿದ್ದೇವೆ. ಆದರೆ 25 ಲಕ್ಷ ರೂ ಆಗುವುದಿಲ್ಲ. ಆದರೆ 4,6,8 ಲಕ್ಷ ಇದ್ದಿದ್ದನ್ನು 6,8,10 ಲಕ್ಷ ರೂ. ಮಾಡುತ್ತೇವೆ ಎಂದು ರಾಜ್ಯ ವಕೀಲರ ಪರಿಷತ್‌ನ ಉಪಾಧ್ಯಕ್ಷ ವಿನಯ್ ಬಾಳಾಸಾಹೇಬ್ ಮಾಂಗಳೇಕರ್ ಆಶ್ವಾಸನೆ ನೀಡಿದರು.

# ಅಧಿಕಾರ ಹಸ್ತಾಂತರದ ಚರ್ಚೆ ಬೇಡ : ಡಿಕೆಶಿ

## ಯಾವುದೇ ಸೂತ್ರ ಇಲ್ಲ, ಸಿಎಂಗೆ ನನಗೆ ಪ್ರತ್ಯೇಕ ಜವಾಬ್ದಾರಿಗಳಿವೆ ಎಂದು ಡಿಸಿಎಂ



ಬೆಂಗಳೂರು, ಡಿ. 7- ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಹಗರಣ, ಅಧಿಕಾರ ಹಸ್ತಾಂತರ ವಿಚಾರವಾಗಿ ಯಾರೊಬ್ಬರೂ ಚರ್ಚೆ ಮಾಡಬಾರದು, ಒಪ್ಪಂದ ಸೂತ್ರದ ಬಗ್ಗೆ ಯಾರೂ ಮಾತನಾಡುವ ಅವಶ್ಯಕತೆ ಹಾಗೂ ಸಂದರ್ಭ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಯಾವುದೇ ಸೂತ್ರ ಇಲ್ಲ, ಮುಖ್ಯಮಂತ್ರಿಗಳಿಗೆ ಕೆಲವು ಜವಾಬ್ದಾರಿ, ನನಗೆ ಕೆಲವು ಜವಾಬ್ದಾರಿ ವಹಿಸಲಾಗಿದೆ, ನಾವು ನಮ್ಮ ಕೆಲಸ ಮಾಡುತ್ತಿದ್ದೇವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದೇ ಅಂತಿಮ ಎಂಬುದಾಗಿ ನಾನು ಹೇಳಿದ್ದೇನೆ, ನಾವು ಮತ್ತು ಸಚಿವ ಮುನಿಯಪ್ಪ ರಾಜಕೀಯವಾಗಿ ಕೆಲಸ ಮಾಡುತ್ತಿದ್ದೇವೆ ಎಂದರು.

ಕೋವಿಡ್ ಅವಧಿಯ ಅಕ್ರಮ ಕುರಿತ ಮೈಕಲ್ ಕುನ್ಹಾ ವರದಿ ಸ್ವೀಕರಿಸಿದ್ದು, ಪರಿಶೀಲನೆ ಮಾಡುತ್ತಿ ದ್ದೇವೆ, ವರದಿ ಶಿಫಾರಸ್ಸಿನಂತೆ ಕಾನೂನು ಚೌಕಟ್ಟಿನಲ್ಲಿ ಕ್ರಮಕೈಗೊ ಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇವೆ.

ಇಲಾಖಾ ಅಧಿಕಾರಿಗಳ ವಿರುದ್ಧವೂ ವಿಚಾರಣೆ ನಡೆಯಲಿದೆ, ಕೆಲವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದೆ, ಎಷ್ಟು ಪ್ರಕರಣಗಳು ದಾಖಲಾಗುತ್ತವೆಯೋ ತಿಳಿಯದು.

ಚಾಮರಾಜನಗರ ಆಕ್ಸಿಜನ್ ದುರಂತ ಪ್ರಕರಣದಲ್ಲಿ ಯಾವುದೇ ತಪ್ಪು ನಡೆದಿಲ್ಲ ಎಂಬ ವರದಿಯನ್ನು ನಮ್ಮ ಸರ್ಕಾರ ಒಪ್ಪುವುದಿಲ್ಲ, ಮತ್ತೆ ಪ್ರಕರಣದ ತನಿಖೆಯಾಗಬೇಕು, ನಾನು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಆಸ್ಪತ್ರೆಗೆ ಭೇಟಿ ನೀಡಿ ಪರಿಸ್ಥಿತಿ ಅಲೋಕಿಸಿದ್ದೆವು, 36 ಮಂದಿ ಮೃತಪಟ್ಟಿದ್ದು, ಅಂದಿನ ಸಚಿವರು ಮೂರು ಮಂದಿ ಮೃತಪಟ್ಟಿರುವುದಾಗಿ ತಿಳಿಸಿದ್ದರು, ಮೃತಪಟ್ಟ 36 ಮಂದಿಯ ಮನೆಗೆ ಭೇಟಿ ನೀಡಿದ್ದೇನೆ.

ಬೆಂಗಳೂರು ಪಾಲಿಕೆ ವ್ಯಾಪ್ತಿಯಲ್ಲಿ 84 ಲಕ್ಷ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಲಾಗಿದೆಯೆಂದು 502 ಕೋಟಿ ರೂ. ಬಿಲ್ ಮಾಡಲಾಗಿದೆ, 400 ಕೋಟಿ ರೂ. ಪಾವತಿಯೂ ಆಗಿದೆ, 84 ಲಕ್ಷ ಪರೀಕ್ಷೆ ಎಂದರೆ ಬೆಂಗಳೂರಿನಲ್ಲಿನ ಪ್ರತಿ ಮನೆಗೆ ಇಬ್ಬರ ಪರೀಕ್ಷೆ ಆಗಿರಬೇಕಲ್ಲವೇ ಎಂದರು.

ಕಿದ್ವಾಯಿ ಸಂಸ್ಥೆಯೊಂದರಲ್ಲೇ 24 ಲಕ್ಷ ಪರೀಕ್ಷೆ ಮಾಡಲಾಗಿದೆ ಎಂದಿದ್ದಾರೆ, ತಾಂತ್ರಿಕ ಸಾಮರ್ಥ್ಯ, ಐಸಿಎಂಆರ್ ಅನುಮತಿ ಇಲ್ಲದೆ ಪರೀಕ್ಷೆ ನಡೆಸಲಾಗಿದೆ, 146 ಕೋಟಿ ರೂ. ಬಿಲ್ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದು, 24 ಲಕ್ಷ ಜನರಿಗೆ ಒಂದೇ ಕಡೆ ಪರೀಕ್ಷೆ ನಡೆಸಿದ ಬಗ್ಗೆ ಸಂಶಯಗಳಿವೆ.

ಕಾನೂನು ಚೌಕಟ್ಟು ಮೀರಿ ಏನೆಲ್ಲಾ ತೀರ್ಮಾನ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಅಧಿಕಾರಿಗಳು ವರದಿ ನೀಡಿದ್ದು, ಪರಿಶೀಲನೆ ಮಾಡುತ್ತೇವೆ, ಮಾರ್ಗದರ್ಶನ ನೀಡಲು ನಿವೃತ್ತ ಅಧಿಕಾರಿಗಳ ಮಟ್ಟದ ಸಮಿತಿ ರಚಿಸಲಾಗುವುದು, ಪ್ರಕರಣದಲ್ಲಿ ಯಾರಿಗೂ ಅನಗತ್ಯ ತೊಂದರೆ ಮಾಡಬಾರದು ಎಂಬ ಕಾರಣಕ್ಕೆ ಸಮಿತಿ ರಚಿಸಿದ್ದೇವೆ.

ಮಾಜಿ ಆರೋಗ್ಯ ಸಚಿವರ ಹೆಸರನ್ನೇ ನಾನು ಪ್ರಸ್ತಾಪಿಸಿಲ್ಲ, ವರದಿಯ ಪ್ರಮುಖ ಅಂಶಗಳನ್ನು ಮಾಧ್ಯಮಗಳ ಮುಂದೆ ಪ್ರಸ್ತಾಪ ಮಾಡಿದ್ದೇನೆ, ಅಕ್ರಮದಲ್ಲಿ ಭಾಗಿಯಾಗಿರುವ ಆಯುಕ್ತರು, ಅಧಿಕಾರಿಗಳು, ರಾಜಕಾರಣಿಗಳು, ಖಾಸಗಿ ಆಸ್ಪತ್ರೆಗಳು, ಪ್ರಯೋಗಾಲಯಗಳ ವಿರುದ್ಧ ಸೆಕ್ಷನ್ 71 ಹಾಗೂ ಸೆಕ್ಷನ್ 11ರಡಿ ಸಾರ್ವಜನಿಕ ಸೇವಾವಧಿಯಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆ ಅನ್ವಯ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂಬುದಾಗಿ ವರದಿಯಲ್ಲಿ ತಿಳಿಸಲಾಗಿದೆ.

ನ್ಯಾಯಮೂರ್ತಿ ಕುನ್ಹಾ ವರದಿ ಆಧರಿಸಿ ಎಸ್‌ಐಟಿ ರಚನೆಯಾಗಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ, ಎಲ್ಲ ಅಂತಿಮವಾದ ನಂತರ ಮಾಹಿತಿ ನೀಡುತ್ತೇವೆ, ಈ ವಿಚಾರವಾಗಿ ಬಿಜೆಪಿಯವರಿಗೆ ಉತ್ತರ ನೀಡುವ ಅವಶ್ಯಕತೆ ಇಲ್ಲ, ಸಮಿತಿ ಶಿಫಾರಸ್ಸು ಪರಿಶೀಲಿಸುತ್ತಿದ್ದು, ಅಧಿಕಾರಿಗಳಿಗೆ ವಿಚಾರಣೆ ನಡೆಸುವ ಸಂಪೂರ್ಣ ಅಧಿಕಾರ ನೀಡಿದ್ದೇವೆ ಎಂದರು.

ಪ್ರಕರಣ ಪರಿಶೀಲನೆಗೆ ಸಮಯಾವಕಾಶ ಬೇಕು, ಕಾನೂನು ತನ್ನ ಕಾರ್ಯ ನಿರ್ವಹಿಸಲಿದೆ, ಅಧಿಕಾರಿಗಳು ತಮ್ಮ ಕೆಲಸ ಮಾಡಿ ಕ್ರಮ ಕೈಗೊಳ್ಳಲಿದ್ದು ನಾವು ಹಸ್ತಕ್ಷೇಪ ಮಾಡುವುದಿಲ್ಲ.

ಬಿಜೆಪಿ ಸರ್ಕಾರ ಹೆಣದ ಮೇಲೆ ಹಣ ಮಾಡಿದೆ ಎಂಬುದಾಗಿ ನಾವೇ ವಿಧಾನಸಭೆಯಲ್ಲಿ ಭಾಷಣ ಮಾಡಿದ್ದೇವೆ, ಜನ ಇವುಗಳಿಂದ ರೋಸಿದ್ದಾರೆ, ಕೋವಿಡ್ ಹಣ ತಿಂದವರನ್ನು ಬಿಡುವುದಿಲ್ಲ.

ಪಿಪಿಇ ಕಿಟ್ ಹಾಗೂ ಯಂತ್ರೋಪಕರಣ ಖರೀದಿ ಹಗರಣದ ಪ್ರಕ್ರಿಯೆ ನಡೆಯುತ್ತಿದೆ, ಕೆಲವರಿಗೆ ನೋಟೀಸ್ ನೀಡಲಾಗಿದೆ, ಮೇಲ್ವಿಚಾರಣೆ ಮಾಡುತ್ತಿದ್ದೇವೆ ಎಂದರು.

# ಪ್ರವಾಹಕ್ಕೆ ತುತ್ತಾದ ತಮಿಳುನಾಡಿಗೆ ಕೇಂದ್ರದಿಂದ 944 ಕೋಟಿ ಪರಿಹಾರ

ನವದೆಹಲಿ, ಡಿ.7- ಕಳೆದ ನವೆಂಬರ್ 30ರಂದು ಅಪ್ಪಳಿಸಿದ ಫೆಂಜಲ್ ಚಂಡಮಾರುತದಿಂದಾಗಿ ಪ್ರವಾಹಕ್ಕೆ ತುತ್ತಾಗಿರುವ ರಾಜ್ಯದ ಸಂತ್ರಸ್ತರಿಗೆ ನೆರವು ನೀಡಲು ಎಸ್‌ಡಿಆರ್‌ಎಫ್‌ನಿಂದ 944.80 ಕೋಟಿಯನ್ನು ಎರಡು ಕಂತುಗಳಲ್ಲಿ ತಮಿಳುನಾಡು ಸರ್ಕಾರಕ್ಕೆ ಬಿಡುಗಡೆ ಮಾಡಲು ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯ ಅನುಮೋದನೆ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

ಚಂಡಮಾರುತದಿಂದಾಗಿ ಸುರಿದ ಭಾರಿ ಮಳೆಯಿಂದಾಗಿ ತಮಿಳುನಾಡು ಮತ್ತು ಪುದುಚೇರಿಯಲ್ಲಿ ಸಂಭವಿಸಿರುವ ಹಾನಿ ಕುರಿತು ಪರಿಶೀಲಿಸಲು ಅಂತರ–ಸಚಿವಾಲಯದ ಕೇಂದ್ರ ತಂಡವನ್ನು (ಐಎಮ್‌ಸಿಟಿ) ಕಳುಹಿಸಲಾಗಿದೆ.

ಐಎಮ್‌ಸಿಟಿಯ ಮೌಲ್ಯಮಾಪನ ವರದಿ ಸ್ವೀಕರಿಸಿದ ಬಳಿಕ, ವಿಪತ್ತು ಪೀಡಿತ ರಾಜ್ಯಗಳಿಗೆ ಎನ್‌ಡಿಆರ್‌ಎಫ್‌ನಿಂದ ಹೆಚ್ಚುವರಿ ಆರ್ಥಿಕ ಸಹಾಯವನ್ನು ನೀಡಲಾಗುವುದು ಎಂದು ಪ್ರಕಟಣೆ ಹೇಳಿದೆ.

ಫೆಂಜಲ್ ಚಂಡಮಾರುತದಿಂದ ತಮಿಳುನಾಡಿನಲ್ಲಿ ಉಂಟಾಗಿದ್ದ ಪ್ರವಾಹ ಪರಿಸ್ಥಿತಿ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) 2000 ಕೋಟಿ ರೂ. ತುರ್ತು ಪರಿಹಾರ ನೀಡುವಂತೆ ಮನವಿ ಮಾಡಿದ್ದರು.

ತಕ್ಷಣ ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ ಬಾಯ್ಸ್ ಮತ್ತು ಸೇಲ್ ಗರ್ಲ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ
ಶಾಂತಲಾ ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327

# ಮಣಿಪುರ : 9 ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸೇವೆ ಸ್ಥಗಿತ

ಇಂಫಾಲ, ಡಿ.7 - ಮಣಿಪುರ ಸರ್ಕಾರವು ಒಂಬತ್ತು ಪ್ರಕ್ಷುಬ್ಧಿತ ಜಿಲ್ಲೆಗಳಲ್ಲಿ ಮೊಬೈಲ್ ಡೇಟಾ ಸೇವೆಗಳ ಮೇಲಿನ ನಿಷೇಧವನ್ನು ಡಿಸೆಂಬರ್ 9 ರವರೆಗೆ ವಿಸ್ತರಿಸಿದೆ. ಇಂಫಾಲ್ ಪಶ್ಚಿಮ, ಇಂಫಾಲ್ ಪೂರ್ವ, ಕಾಕ್ಚಿಂಗ್, ಬಿಷ್ಣುಪುರ್, ತೌಬಲ್, ಚುರಾ ಚಂದ್‌ಪುರ, ಕಾಂಗ್‌ಪೋಕ್ಪಿ, ಫೆರ್ಜಾಲ್ ಮತ್ತು ಜಿರಿಬಾಮ್ ಜಿಲ್ಲೆಗಳಲ್ಲಿ ಡಿಸೆಂಬರ್ 9 ರಂದು ಸಂಜೆ 5.15 ರವರೆಗೆ ಮೊಬೈಲ್ ಇಂಟರ್‌ನೆಟ್ ಮತ್ತು ಮೊಬೈಲ್ ಡೇಟಾ ಸೇವೆಗಳನ್ನು ಸ್ಥಗಿತಗೊಳಿಸಲಾಗುತ್ತಿದೆ. ಜಿರಿ ಮತ್ತು ಬರಾಕ್ ನದಿಗಳಲ್ಲಿ ಮೂವರು ಮಹಿಳೆ ಯರು ಮತ್ತು ಮೂವರು ಮಕ್ಕಳ ಶವಗಳನ್ನು ಪತ್ತೆಹಚ್ಚಿದ ನಂತರ ರಾಜ್ಯದಲ್ಲಿ ಹಿಂಸಾಚಾರ ನಡೆದ ನಂತರ ನವೆಂಬರ್ 16 ರಂದು ಈ ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸೇವೆ ಗಳನ್ನು ಸ್ಥಗಿತಗೊಳಿಸಲಾಗಿತ್ತು.

# 24 ಗಂಟೆಯೊಳಗೆ ಕಾರು ಕಳ್ಳನ ಬಂಧನ

ದಾವಣಗೆರೆ, ಡಿ.7- ಕಾರು ಕಳ್ಳತನವಾದ 24 ಗಂಟೆಯೊಳಗೆ ಕಾರು ಸಹಿತ ಕಳ್ಳನನ್ನು ಹಿಡಿಯುವಲ್ಲಿ ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಶುಕ್ರವಾರ ಬೆಳಿಗ್ಗೆ ಬಾಲಾಜಿ ಬಡಾವಣೆ ಶಿವಗಂಗಾ ಕನ್ವೆನ್ಷನ್ ಹಾಲ್ ಹತ್ತಿರ ನಿಲ್ಲಿಸಿದ್ದ ಟೊಯೋಟಾ ಫಾರ್ಚುನರ್ ಕಾರನ್ನು ಬೈಕಿನಲ್ಲಿ ಬಂದಿದ್ದ ಇಬ್ಬರಲ್ಲಿ ಒಬ್ಬ ಇಳಿದು ಕಾರು ಕಳ್ಳತನ ಮಾಡಿಕೊಂಡು ಹೋಗಿದ್ದನು. ಈ ಕುರಿತು ಚಂದನ್ ಎಂಬುವರು ವಿದ್ಯಾನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಕಾರ್ಯ ಪ್ರವೃತ್ತರಾದ ಪೊಲೀಸರು, ಪತೇಹ್ ಅಹಮದ್ ಪೈಲ್ವಾನ್ (30) ಎಂಬಾತನನ್ನು ಹರಿಹರ ನಗರದಲ್ಲಿ ಬಂಧಿಸಿದ್ದಾರೆ. ಆತನಿಂದ ಅಂದಾಜು 10 ಲಕ್ಷ ಮೌಲ್ಯದ ಟೊಯೋಟಾ ಫಾರ್ಚುನರ್ ಕಾರನ್ನು ವಶಪಡಿಸಿಕೊಂಡಿದ್ದು, ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪ್ರಕರಣದ ಇನ್ನೊಬ್ಬ ಆರೋಪಿ ಪತ್ತೆಗೆ ಪೊಲೀಸರು ಜಾಲ ಬೀಸಿದ್ದಾರೆ.

ಹರಿಹರ ಕೋಟೆ ಆಂಜನೇಯ ದೇವಸ್ಥಾನದ ಹತ್ತಿರ ಚರ್ಚ್ ರಸ್ತೆಯಲ್ಲಿ ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದು, ಈ ಕುರಿತು ಸಹ ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾ ಗಿದೆ. ಪತೇಹ್ ಅಹಮದ್ ಮೇಲೆ ಈ ಹಿಂದೆ ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ಅಪರಾಧ ಪ್ರಕರಣವೂ ದಾಖಲಾಗಿರುವುದು ವಿಚಾರಣೆ ವೇಳೆ ಗೊತ್ತಾಗಿದೆ.

ಪೊಲೀಸರ ಕ್ಷಿಪ್ರ ಕಾರ್ಯಾಚರಣೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.










KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas